ಪ್ರಪಾದಾನಕ್ಕೆ ಮಂತ್ರ: ಪ್ರಪೇಯಂ ಸರ್ವಸಾಮಾನ್ಯಾ ಭೂತೇಭ್ಯಃ ಪ್ರತಿಪಾದಿತಾ। ಅಸ್ಯಾಃ ಪ್ರದಾನಾತ್ ಪಿತರಃ ತೃಪ್ಯಂತ್ವಖಿಲದೇವತಾಃ ॥

ಉದಕುಂಭದಾನಮಂತ್ರ: ಏಷಧರ್ಮಘಟೋದತ್ತೋಬ್ರಹ್ಮವಿಷ್ಣುಶಿವಾತ್ಮಕಃ। ಅಸ್ಯ ಪ್ರದಾನಾತ್ ಸಕಲಾಃ ಮಮ ಸಂತು ಮನೋರಥಾಃ ॥

ರಾಮನವಮೀ

ತನ್ನ ಮನೆಯ ಉತ್ತರಭಾಗದಲ್ಲಿ ಮಂಟಪಮಾಡಬೇಕು. ಬಲಗೈಯಲ್ಲಿ ಜ್ಞಾನಮುದ್ರಾ, ತೊಡೆಯ ಮೇಲೆ ಕುಳಿತಿರುವ ಸೀತೆಯನ್ನು ಎಡಗೈ ಯಿಂದ ಆಲಿಂಗಿಸಿರುವ ಸುವರ್ಣದ ರಾಮಪ್ರತಿಮೆಯನ್ನು ಮಾಡಿಸಿ, ಆ ಮಂಟಪದಲ್ಲಿಟ್ಟು ಪೂಜಿಸಿ, ತೊಟ್ಟಿಲುಪೂಜೆ ಮಾಡಿ, ಆ ಸುವರ್ಣ ಪ್ರತಿಮೆಯನ್ನು ಸತ್ಪಾತ್ರರಿಗೆ ದಾನಮಾಡಬೇಕು.

ರಾಮಾರ್ಘ್ಯಮಂತ್ರ: ಕೌಸಲ್ಯಾಗರ್ಭಸಂಭೂತ ಸದಾ ಸೌಮಿತ್ರಿವತ್ಸಲ। ಜಾನಕೀಸಹಿತೋ ರಾಮ ಗೃಹಾಣಾರ್ಘ್ಯಂ ನಮೋಽಸ್ತು ತೇ ॥ ಕೌಸಲ್ಯಾನಂದನೋ ವೀರ ರಾವಣಾಸುರಮರ್ದನ । ಸೀತಾಪತೇ ನಮಸ್ತುಭ್ಯಂ ಗೃಹಾಣಾರ್ಘ್ಯಂ ನಮೋಽಸ್ತು ತೇ ॥

ಗೌರೀ ತೃತೀಯಾ

ಚೈತ್ರಶುದ್ಧತೃತೀಯಾದಿಂದವೈಶಾಖಶುದ್ಧತೃತೀಯಾವರೆಗೆರುದ್ರದೇವರಿಂದ ಸಹಿತಳಾದ ಪಾರ್ವತೀದೇವಿಯನ್ನು ಪೂಜಿಸಿ, ತೊಟ್ಟಿಲು ಪೂಜೆಯನ್ನು ಮಾಡಬೇಕು. ಸುವಾಸಿನೀಸ್ತ್ರೀಯರಿಗೆ ಉಡಿ ತುಂಬಬೇಕು.

ಶ್ರೀಕೃಷ್ಣದೋಲೋತ್ಸವ

ಚೈತ್ರ ಶು ಏಕಾದಶಿಯಂದು ಶ್ರೀಕೃಷ್ಣನಿಗೆತೊಟ್ಟಿಲುಪೂಜೆಯನ್ನು ಮಾಡಿರಾತ್ರಿ ಭಜನೆ, ನೃತ್ಯ ಮೊದಲಾದವುಗಳನ್ನು ಮಾಡುತ್ತಾ ಜಾಗರವನ್ನು ಮಾಡಬೇಕು.

ವೈಶಾಖ ಮಾಸ

ಅಂತ್ಯಪುಷ್ಕರಣೀ

ವೈಶಾಖ, ಆಷಾಢ, ಕಾರ್ತಿಕ, ಮಾಘ, ಈ ಮಾಸದಲ್ಲಿ ಪ್ರತಿದಿನ ಸೂರ್ಯೋದಯಕ್ಕಿಂತಲೂ ಮುಂಚಿತವಾಗಿ ಸ್ನಾನಾದಿಗಳನ್ನು ಮಾಡುವುದು ವಿಶೇಷ ಫಲದಾಯಕ. ರೋಗಾದಿಗಳಿಂದ 1 ತಿಂಗಳು ಪೂರ್ಣವಾಗಿ ಸ್ನಾನ ಮಾಡಲು ಅನುಕೂಲವಿಲ್ಲದಿದ್ದಾಗ ಕೊನೆಯ ಮೂರುದಿನ (ತ್ರಯೋದಶೀ, ಚತುರ್ದಶೀ, ಪೌರ್ಣಿಮಾ)ಗಳಲ್ಲಾದರೂ ಸ್ನಾನವನ್ನು ಮಾಡಬೇಕು.

ಅಕ್ಷಯತೃತೀಯಾ

ಈ ದಿನ ಮಾಡಿದ ಸ್ನಾನ ಜಪ, ಹೋಮ, ಪಿತೃತರ್ಪಣ, ದಾನ ಇವುಗಳು ಅಕ್ಷಯವಾದ ಫಲವನ್ನು ನೀಡುತ್ತದೆ. ಸರ್ವಪಾಪಗಳನ್ನು ಪರಿಹರಿಸುತ್ತದೆ. ಇಂದು ದೇವರಿಗೆ ವಿಶೇಷವಾಗಿ ಗಂಧವನ್ನು ಸಮರ್ಪಿಸಬೇಕು. **ಯಃ ಪಶ್ಯತಿ ತೃತೀಯಾಯಾಂ ಕೃಷ್ಣಂ ಚಂದನಭೂಷಿತಮ್ । ವೈಶಾಖಸ್ಯ ಸಿತೇ ಪಕ್ಷೇ ಸ ಯಾತ್ಯಚ್ಯುತಮಂದಿರಮ್ ॥**

ಪರಶುರಾಮಜಯಂತೀ

ಅರ್ಘ್ಯಮಂತ್ರ: ಜಮದಗ್ನಿಸುತೋ ವೀರ ಕ್ಷತ್ರಿಯಾಂತಕರಪ್ರಭೋ। ಗೃಹಾಣಾರ್ಘ್ಯಂ ಮಯಾ ದತ್ತಂ ಕೃಪಯಾ ಪರಮೇಶ್ವರ ॥

ಗಂಗೋತ್ಪತ್ತಿ

ಜಹ್ನುರಾಜನು ಗಂಗೆಯನ್ನು ಕ್ರೋಧದಿಂದ ಪಾನಮಾಡಿ ಕಿವಿಯಿಂದ ಹೊರಗೆ ಹಾಕಿದ ದಿವಸ.

ಆಗೀಹುಣ್ಣಿಮೆ (ಅಗ್ನಿಹುಣ್ಣಿಮೆ)

ಇಂದು ಜಲದಾನಕ್ಕೆ ವಿಶೇಷ ಪ್ರಾಶಸ್ತ್ಯವಿದೆ. ಅದರಂತೆ ಮೊಸರು, ಮೊಸರನ್ನ, ಪಾನಕ ಮೊದಲಾದವುಗಳನ್ನು ದಾನಮಾಡಬೇಕು.

ಜ್ಯೇಷ್ಠ ಮಾಸ

ದಶಹರಾ

ಜ್ಯೇಷ್ಠ ಶುದ್ಧ ದಶಮೀ, ಮಂಗಳವಾರ, ಹಸ್ತ ನಕ್ಷತ್ರದಲ್ಲಿ ಭಗೀರಥನ ತಪಸ್ಸಿಗೆ ಮೆಚ್ಚಿ ಗಂಗೆಯು ಸ್ವರ್ಗದಿಂದ ಭೂಮಿಗೆ ಇಳಿದು ಬಂದಳು. ಈ ದಿನ ವ್ಯತೀಪಾತ, ಗರಜ, ನಂದಾ, ಕನ್ಯಾರಾಶಿಸ್ಥ ಚಂದ್ರ, ವೃಷಭರಾಶಿಸ್ಥ ರವಿ ಎಂಬ ಯೋಗಗಳು ಸೇರಿದರೆ ಮಹಾಫಲ. ಹತ್ತು ವಿಧಪಾಪವನ್ನು ಕಳೆದುಕೊಳ್ಳುವುದಕ್ಕಾಗಿ ನದೀಸ್ನಾನ, ತಿಲತರ್ಪಣ, ಗಂಗಾ ಪೂಜಾದಿಗಳನ್ನು ಮಾಡಬೇಕು. ಅದರಲ್ಲೂ ಕಾಶಿಯಲ್ಲಿರುವ ''ದಶಾಶ್ವಮೇಧ ಘಾಟಿನಲ್ಲಿ'' ಗಂಗಾಸ್ನಾನ ಶ್ರೇಷ್ಠ. ನಾರಾಯಣ, ಬ್ರಹ್ಮ, ರುದ್ರ, ಭಾಸ್ಕರ, ಭಗೀರಥ, ಹಿಮಾಲಯ ಈ ಪ್ರತಿಮೆಗಳನ್ನು ಗಂಧಾದಿಗಳಿಂದ ಪೂಜಿಸಬೇಕು.''ನಮಃ ಶಿವಾಯೈ ನಾರಾಯಣ್ಯೈ ದಶಹರಾಯೈ ಗಂಗಾಯೈ ನಮೋ ನಮಃ'' ಎಂದು ಅವತ್ತು ನಿರಂತರ ಜಪಿಸಬೇಕು. ಅಂದು ಒಂದು ಕಲಶದಲ್ಲಿ ಗಂಗೆಯನ್ನು ಆವಾಹಿಸಿ ಷೋಡಶೋಪಚಾರ ಪೂಜೆಯನ್ನು ಮಾಡಿ ಗಂಗೆಗೆ **ಬ್ರಹ್ಮದಂಡಸಮುದ್ಭೂತೇ ಗಂಗೇ ತ್ರಿಪಥಗಾಮಿನೀ । ತ್ರೈಲೋಕ್ಯವಂದಿತೇ ದೇವಿ ಗೃಹಾಣಾರ್ಘ್ಯಂ ನಮೋಸ್ತು ತೇ ॥** ಎಂದು ಅರ್ಘ್ಯವನ್ನು ನೀಡಬೇಕು. ಈ ದಿನ 10 ಸಂಖ್ಯೆಗೆ ವಿಶೇಷ ಪ್ರಾಧಾನ್ಯ ಇರುವ ಕಾರಣ 10 ಸಂಖ್ಯೆಯಲ್ಲಿ ಫಲ ಮೊದಲಾದವುಗಳನ್ನು ದಾನವಾಗಿ ನೀಡಬೇಕು.

ವಟಸಾವಿತ್ರೀ

ಈದಿನದೀರ್ಘಸೌಮಂಗಲ್ಯಕ್ಕಾಗಿಸಾವಿತ್ರಿಯಪೂಜೆಯನ್ನು ಯಥೋಕ್ತವಾಗಿ ಮಾಡಿ ಹೀಗೆ ಪ್ರಾರ್ಥಿಸಬೇಕು. **ಗತ್ವಾಜ್ಞೇ ಜಗನ್ನಾತಃ ಸಾವಿತ್ರೀ ಪತಿದೈವತೇ । ಪತ್ಯಾ ಸಹ ಅವಿಯೋಗಂ ಮೇ ವಟಸ್ಥೇ ಕುರು ತೇ ನಮಃ ॥**

ಆಷಾಢ ಮಾಸ

ಧಾರಣಪಾರಣ

ಧಾರಣ-ಪಾರಣವೆಂದರೆ ಒಂದು ದಿನ ಉಪವಾಸ, ಮಾರನೇದಿನ ಭೋಜನವು. ಇದನ್ನು ಚಾತುರ್ಮಾಸ್ಯದ ನಾಲ್ಕು ತಿಂಗಳಲ್ಲೂ ಸಾಧ್ಯವಿದ್ದರೆ ಮಾಡಬಹುದು. ಅಶಕ್ಯವಾದಾಗ 2 ತಿಂಗಳು (ಆಷಾಢ,ಕಾರ್ತಿಕ),1 ತಿಂಗಳು (ಆಷಾಢ ಅಥವಾ ಕಾರ್ತಿಕ) ಮಾಡಬಹುದು. ಪುಣ್ಯಾಹವನ್ನು ಮಾಡಿ, ಸಂಕಲ್ಪಮಾಡಿ ಪ್ರಾರಂಭಿಸಬೇಕು. ಪಾರಣೆಯ ದಿನ ನೂರೆಂಟು ಬಾರಿ ನಾರಾಯಣನಿಗೆ ಅರ್ಘ್ಯವನ್ನು ಕೊಟ್ಟು ಪಾರಣೆಯನ್ನು ಮಾಡಬೇಕು. ಈ ವ್ರತವನ್ನು ಮುಗಿಸಿದ ಮೇಲೆ ಉದ್ಯಾಪನವನ್ನು ಮಾಡಬೇಕು. ಲಕ್ಷ್ಮೀನಾರಾಯಣನ ಪ್ರತಿಮೆಯನ್ನು ತಂದು ಪಂಚಾಮೃತಗಳಿಂದ ಅರ್ಚಿಸಿ, ರಾತ್ರಿಯಲ್ಲಿ ಪುರಾಣಶ್ರವಣ ಮಾಡುತ್ತಾ ಜಾಗರಣವನ್ನು ಮಾಡಬೇಕು. ಮಾರನೇ ದಿನ ಬ್ರಾಹ್ಮಣರನ್ನು ಭೋಜನಕ್ಕೆ ಆಮಂತ್ರಿಸಬೇಕು. ಒಂದು ತಿಂಗಳು ಉಪವಾಸವಾದರೆ ಹದಿನೈದು ಜನರಿಗೆ ಭೋಜನವಾಗಬೇಕು. ಎರಡು ತಿಂಗಳಾದರೆ ಮೂವತ್ತು ಬ್ರಾಹ್ಮಣರಿಗೆ, ನಾಲ್ಕು ತಿಂಗಳು ಧಾರಣ ಪಾರಣವ್ರತವನ್ನು ಮಾಡಿದರೆ ಇಪ್ಪತ್ತು ಬ್ರಾಹ್ಮಣರಿಗೆ ಕಡಿಮೆ ಇಲ್ಲದಂತೆ ಎಷ್ಟು ಜನ ಬ್ರಾಹ್ಮಣರಿಗೂ ಭೋಜನ ಮಾಡಿಸಬಹುದು. ಉದ್ಯಾಪನಾಂಗ ಹೋಮವನ್ನು ಉತ್ತಮ ಪುರೋಹಿತರನ್ನು ಕೇಳಿ ಮಾಡಬೇಕು.

ಶಯನೀ ಏಕಾದಶೀ

ಆಷಾಢ ಶು.ಏಕಾದಶೀ ದಿನ ದೇವರಪೂಜೆಯ ನಂತರ ದೇವರ ಮುಂದೆ ಕೈಮುಗಿದು ದೇವರ ಶಯನೋತ್ಸವವನ್ನು ಮಾಡಿಸಬೇಕು. ಸುಪ್ತೇ ತ್ವಯಿ ಜಗನ್ನಾಥ ಜಗತ್ ಸುಪ್ತಂ ಭವೇದಿದಮ್ । ವಿಬುದ್ಧೇ ಚ ವಿಬುದ್ಧ್ಯೇತ ಪ್ರಸನ್ನೋ ಮೇ ಭವಾಚ್ಯುತ ॥ ಎಂದು ಪ್ರಾರ್ಥಿಸಬೇಕು.

ಚಾತುರ್ಮಾಸ್ಯವ್ರತ ಪ್ರಾರಂಭಕ್ರಮ

ಆಷಾಢ ಶು. ಏಕಾದಶಿಯ ದಿನ ದೇವರಪೂಜೆಯ ನಂತರ ದೇವರ ಮುಂದೆ ಕೈಮುಗಿದು, **ಚತುರೋ ವಾರ್ಷಿಕಾನ್ ಮಾಸಾನ್ ದೇವಸ್ಯೋತ್ಥಾಪನಾವಧಿ । ಇಮಂ ಕರಿಷ್ಯೇ ನಿಯಮಂ ನಿರ್ವಿಘ್ನಂ ಕುರು ಮೇಽಚ್ಯುತ ॥ ಇದಂ ವ್ರತಂ ಮಯಾ ದೇವ ಗೃಹೀತಂ ಪುರತಸ್ತವ । ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ತವ ಕೇಶವ ॥ ಗೃಹೀತೇಽಸ್ಮಿನ್ ವ್ರತೇ ದೇವ ಪಂಚತ್ವಂ ಯದಿ ಮೇ ಭವೇತ್ । ತದಾ ಭವತು ಸಂಪೂರ್ಣಂ ತತ್ಪ್ರಸಾದಾತ್ ಜನಾರ್ದನ ॥ ಶ್ರಾವಣೇ ವರ್ಜಯೇ ಶಾಕಂ ದಧಿ ಭಾದ್ರಪದೇ ತಥಾ । ದುಗ್ಧಂ ಆಶ್ವಯುಜೇ ಮಾಸಿ ಕಾರ್ತಿಕೇ ದ್ವಿದಲಂ ತಥಾ ॥ ಇಮಂ ಕರಿಷ್ಯೇ ನಿಯಮಂ ನಿರ್ವಿಘ್ನಂ ಕುರು ಮೇಽಚ್ಯುತ ।** ಎಂದು ಪ್ರಾರ್ಥಿಸಿ ನಂತರ ಆಚಮನ ಪ್ರಾಣಾಯಾಮ ಮಾಡಿ ದೇಶಕಾಲ ಗಳನ್ನು ಉಚ್ಚರಿಸಿ ''**ಅಸ್ಮದ್ ಗುರ್ವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಮಾಸನಿಯಾಮಕಾಭಿನ್ನಅಸ್ಮತ್ಕುಲದೇವತಾಭಿನ್ನ ರಾಮಕೃಷ್ಣಾದ್ಯನಂತಾವತಾರಾತ್ಮಕ ಬಿಂಬಮೂರ್ತಿಪ್ರೇರಣಯಾ ಬಿಂಬ ಮೂರ್ತಿಪ್ರೀತ್ಯರ್ಥಂ ಅಮುಕವ್ರತಂ (ಶಾಕವ್ರತಂ) ಕರಿಷ್ಯೇ**'' ಎಂದು ಆರಂಭದಲ್ಲಿ ಸಂಕಲ್ಪಮಾಡಿ, ವ್ರತ ಮುಗಿದ ಮೇಲೆ ''**ಆಚರಿತಸ್ಯ ಅಮುಕವ್ರತಸ್ಯ (ಶಾಕವ್ರತಸ್ಯ) ಸಮರ್ಪಣಂ ಕರಿಷ್ಯೇ**'' ಎಂದು ಸಮರ್ಪಿಸಬೇಕು.

ಅಶೂನ್ಯಶಯನವ್ರತ

ದಂಪತಿಗಳಿಗೆಪರಸ್ಪರವಿಯೋಗವಾಗದಿರಲು ಆಷಾಡಕೃಷ್ಣದ್ವಿತೀಯಾದಂದು ಈ ವ್ರತವನ್ನು ಆಚರಿಸಬೇಕು. ಇಂದು ಪ್ರಾರಂಭಿಸಿದ ಈ ವ್ರತವನ್ನು ಶ್ರಾ, ಭಾ, ಆಶ್ವೀನ ಮಾಸಗಳ ಕೃಷ್ಣದ್ವಿತೀಯಾಗಳಲ್ಲೂ ಆಚರಿಸಬೇಕು. ಈ ದಿನ ದೇವರಿಗಾಗಿ ಒಂದು ಮಂಚವನ್ನು ತಯಾರಿಸಿ ರೇಷ್ಮೆವಸ್ತ್ರವನ್ನು ಹಾಸಿ ಲಕ್ಷ್ಮೀನಾರಾಯಣರ ಪ್ರತಿಮೆಗಳನ್ನಿಟ್ಟು ಷೋಡಶೋಪಚಾರ ಪೂಜೆಯಿಂದ ಅರ್ಚಿಸಿ ಹೀಗೆ ಪ್ರಾರ್ಥಿಸಬೇಕು. **ಲಕ್ಷ್ಮ್ಯಾ ವಿಯುಜ್ಯತೇ ದೇವ ನ ಕದಾಚಿತ್ ಯಥಾ ಭವಾನ್ । ತಥಾ ಕಲತ್ರಸಂಬಂಧೋ ದೇವ ಮಾ ಮೇ ವಿಯುಜ್ಯತಾಮ್ ॥ ಲಕ್ಷ್ಮ್ಯಾನ ಶೂನ್ಯಂ ವರದ ಯಥಾ ತೇ ಶಯನಂ ಸದಾ । ಶಯ್ಯಾ ಮಮಾಪಿ ಅಶೂನ್ಯಾಸ್ತು ತಥಾತ್ರ ಮಧುಸೂದನ ॥** ನಂತರ ಚಂದ್ರನಿಗೆ ಅರ್ಘ್ಯವನ್ನು ಕೊಡಬೇಕು. **ಗಗನಾಂಗಣಸಂದೀಪ ಕ್ಷೀರಾಬ್ಧಿಮಥನೋದ್ಭವ । ಬಾಭಾಸಿತದಿಗಾಭೋಗ ರಮಾನುಜ ನಮೋಽಸ್ತು ತೇ ॥** ವ್ರತವನ್ನು ಮುಗಿಸಿದ ನಂತರ ದಂಪತಿಗಳಿಗೆ ಹೊಸ ಹಾಸಿಗೆ ಲಕ್ಷ್ಮೀನಾರಾಯಣರ ಪ್ರತಿಮೆ ದಾನವಾಗಿ ಕೊಡಬೇಕು.

ಲಕ್ಷನಮಸ್ಕಾರ ಇತ್ಯಾದಿ

ಲಕ್ಷನಮಸ್ಕಾರ, ಲಕ್ಷಪ್ರದಕ್ಷಿಣ, ಲಕ್ಷತುಲಸೀ, ಲಕ್ಷಪುಷ್ಪ, ಲಕ್ಷಬತ್ತಿ, ಲಕ್ಷದೀಪ ವ್ರತಗಳನ್ನು ಆಷಾಢದಲ್ಲಿ ಪ್ರಾರಂಭಿಸಿ ಕಾರ್ತಿಕದಲ್ಲಿ ಸಮಾಪ್ತಿಮಾಡಬೇಕು. ಲಕ್ಷದೀಪವ್ರತಕ್ಕೆ ಕಾರ್ತಿಕ-ಮಾಘ-ವೈಶಾಖ ಮಾಸಗಳೂ ಉತ್ತಮ. ಈ ವ್ರತಗಳನ್ನುಪುಣ್ಯಾಹವಾಚನಮಾಡಿಕೊಂಡುಪ್ರಾರಂಭಿಸುವದುಶ್ರೇಷ್ಯ.ತಾನು ಮಾಡಿದ ಪಾಪಗಳನ್ನು ಹೇಳಿಕೊಂಡು,ದೇವರ ಕ್ಷಮಾಯಾಚನೆ ಮಾಡುತ್ತಾ, ಸಂಕಲ್ಪಪೂರ್ವಕ ''**ಚಾತುರ್ಮಾಸ್ಯೇ ತು ಸಂಪ್ರಾಪ್ತೇ ಕೇಶವೇ ಶಯನಂ ಗತೇ । ಆಷಾಢಸ್ಯ ಸಿತೇ ಪಕ್ಷೇ ಏಕಾದಶ್ಯಾಂ ಸಮಾಹಿತೇ ॥ ಮಮ ಲಕ್ಷನಮಸ್ಕಾರವ್ರತಸ್ಯ ಪುರುಷೋತ್ತಮ । ನಿರ್ವಿಘ್ನಂ ತದ್‌ವ್ರತಂ ಸಾಂಗಂ ಕುರು ತ್ವಂ ಕೃಪಯಾ ಹರೇ । ಪಾಪಪಂಕನಿಮಗ್ನಂ ಮಾಂ ಪಾಪವೈಶಸ್ಯಭಾಜನಂ । ವ್ರತೇನಾನೇನ ಸುಪ್ರೀತ ಸಮುದ್ಧರ ಜಗತ್ಪತೇ ॥**** ಎಂದು ಪ್ರಾರ್ಥಿಸಿ ನಮಸ್ಕರಿಸಬೇಕು.

ಗೋಪದ್ಮವ್ರತ

ಆಷಾಢ, ಶುದ್ಧ, ಏಕಾದಶೀದಿನ ಪ್ರಾರಂಭಿಸಿ 33 ಗೋಪದ್ಮಗಳನ್ನು ರಂಗೋಲಿಯಿಂದ ಚಿತ್ರಿಸಿ, ಅವನ್ನು ಗಂಧಪುಷ್ಪಗಳಿಂದ ಪೂಜಿಸಿ, 33 ಸಲ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ, ಕಾರ್ತಿಕ ಶುದ್ಧದ್ವಾದಶೀದಿನ 33 ಅಪೂಪದಾನ ಕೊಡಬೇಕು. ಹೀಗೆ 5 ವರ್ಷ ಮಾಡಿ ಉದ್ಯಾಪನ ಮಾಡಬೇಕು.

ಶ್ರಾವಣ ಮಾಸ

ನಾಗಪಂಚಮೀ

ಶ್ರಾವಣ ಶುದ್ಧ ಪಂಚಮೀದಿನ ದೇವರ ಪೂಜೆಯಾದಮೇಲೆ ಮಣ್ಣಿನಿಂದ ಮಾಡಿದ ನಾಗಪೂಜೆಯನ್ನು ಮಾಡಬೇಕು. ಮುಖ್ಯವಾಗಿ ದೇವರ ಶಯ್ಯಾರೂಪ-ಶೇಷದೇವರ ಹಾಗೂ ವಾಸುಕಿ, ತಕ್ಷಕ ಮೊದಲಾದ ನಾಗಗಳ ಪೂಜೆ ಮಾಡಬೇಕು.

ಪವಿತ್ರದೋರಬಂಧನ

ಶ್ರಾವಣ ಶುದ್ಧ ದ್ವಾದಶೀ ದಿನ ಪವಿತ್ರಸಮರ್ಪಣೆಯನ್ನು ಅಗತ್ಯವಾಗಿ ಮಾಡಬೇಕು. ಅದರಿಂದ ಇಡೀ ವರ್ಷ ಮಾಡಿದ ಪೂಜೆಗೆ ಪೂರ್ಣತೆಯು ಬರುತ್ತದೆ. ಇಲ್ಲದಿದ್ದರೆ ಇಡೀ ವರ್ಷಪೂರ್ಣ ಮಾಡಿದ ಪೂಜೆ ನಿಷ್ಫಲವಾಗುವದು. 3 ನೂಲಿನ 1 ದಾರವನ್ನು 3 ಪಟ್ಟು ಮಾಡಬೇಕು. (ಎತ್ತರವಾದ) ಪ್ರತಿಮೆಯ ಪಾದದವರೆಗೆ ಇದ್ದರೆ ಉತ್ತಮ. ಮೊಣ ಕಾಲಿನವರೆಗೆ ಮಧ್ಯಮ. ನಾಭಿಯವರೆಗೆ ಅಧಮ. 108 ದಾರಗಳು ಇರಬೇಕು. 36 ಗಂಟುಗಳು ಉತ್ತಮ, 24 ಮಧ್ಯಮ, 12 ಅಧಮ. ರೇಷ್ಮೆಯ ದಾರವಿದ್ದರೆ ಉತ್ತಮ. ಹತ್ತಿಯದಾರದಿಂದಲೂ ಮಾಡಬಹುದು. ಏಕಾದಶೀದಿನ ಬಿದಿರಿನ ಬುಟ್ಟಿಯಲ್ಲಿ ಇಟ್ಟು ಪವಿತ್ರವನ್ನು ''**ದೇವಸ್ಯ ತ್ವಾ ಸವಿತುಃ ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮ್**'' ಎಂಬ ಮಂತ್ರದಿಂದ ಮೂರು ಬಾರಿ ಪ್ರೋಕ್ಷಿಸಬೇಕು. **ಯೇನದೇವಾಃ ಪವಿತ್ರೇಣಾತ್ಮಾನಂ ಪುನತೇ ಸದಾ । ತೇನ ಸಹಸ್ರಧಾರೇಣ ಪಾವಮಾನ್ಯಃ ಪುನಂತು ಮಾಮ್ । ಪ್ರಾಜಾಪತ್ಯಂ ಪವಿತ್ರಂ ಶತೋದ್ಯಾಮಂ ಹಿರಣ್ಮಯಮ್ । ತೇನ ಬ್ರಹ್ಮವಿದೋ ವಯಮ್ ಪೂತಂ ಬ್ರಹ್ಮ ಪುನೀಮಹೇ ॥** ಎಂದು ಅಭಿಮಂತ್ರಿಸಿ, ''**ನಾರಾಯಣಂ ಆವಾಹಯಾಮಿ । ವಾಸುದೇವಂ... । ವಿಷ್ಣುಂ... । ಕೇಶವಂ... । ನಾರಾಯಣಂ... । ಕೃಷ್ಣಂ ಆವಾಹಯಾಮಿ** ಎಂದು ದಾರಗಳಲ್ಲಿ ಭಗವನ್ಮೂರ್ತಿಗಳನ್ನು ಆವಾಹಿಸಬೇಕು. ಗಂಟುಗಳಲ್ಲಿ **ವಿಶ್ವಂ, ತೈಜಸಂ, ಪ್ರಾಜ್ಞಂ, ತುರೀಯಂ, ಆತ್ಮಾನಂ, ಅಂತರಾತ್ಮಾನಂ, ಜ್ಞಾನಾತ್ಮಾನಂ, ಪರಮಾತ್ಮಾನಂ, ವಾಸುದೇವಂ, ಸಂಕರ್ಷಣಂ, ಪ್ರದ್ಯುಮ್ನಂ, ಅನಿರುದ್ಧಂ, ಮತ್ಸ್ಯಂ, ಕೂರ್ಮಂ, ವರಾಹಂ ನಾರಸಿಂಹಂ, ವಾಮನಂ, ಪರಶುರಾಮಂ, ರಾಮಂ, ಕೃಷ್ಣಂ, ಬುದ್ಧಂ, ಕಲ್ಕಿನಂ, ಅನಂತಂ, ವಿಶ್ವರೂಪಂ, ಅಗ್ನಿಸ್ಥಂ ಅನಿರುದ್ಧಂ, ವಾಯುಗಂ ಪ್ರದ್ಯುಮ್ನಂ, ಸೂರ್ಯಸ್ಥಂ ಸಂಕರ್ಷಣಂ ಆವಾಹಯಾಮಿ.** ಎಲ್ಲ ದಾರಗಳಲ್ಲಿ ಪ್ರಜಾಪತಿಗಂ ವಾಸುದೇವಂ ಆವಾಹಯಾಮಿ ಎಂದು ಆವಾಹಿಸಿ ಷೋಡಶೋಪಚಾರ ಪೂಜೆಯನ್ನು ಮಾಡಬೇಕು. ಹೀಗೆ ಪ್ರಾರ್ಥಿಸಬೇಕು. **ಆಮಂತ್ರಿತೋಽಸಿ ದೇವೇಶ ಪುರಾಣಪುರುಷೋತ್ತಮ । ಪ್ರಾತಸ್ತ್ವಾಂ ಪೂಜಯಿಷ್ಯಾಮಿ ಸಾನ್ನಿಧ್ಯಂ ಕುರು ಕೇಶವ ॥** (ಇದಕ್ಕೆ ಅಧಿವಾಸನವೆನ್ನುತ್ತಾರೆ) ದ್ವಾದಶೀದಿನ ಪೂಜೆಯ ವೇಳೆಗೆ ಸಿದ್ಧಪಡಿಸಿದ ಪವಿತ್ರಗಳನ್ನು, **ದೇವ ದೇವ ನಮಸ್ತುಭ್ಯಂ ಪವಿತ್ರಂ ಪೂತಮುತ್ತಮಮ್ । ಗೃಹೀತ್ವಾ ವಾರ್ಷಿಕೀಂ ಪೂಜಾಂ ಭಗವನ್ ಪರಿಪೂರಯ ॥** ಎಂದು ಪ್ರಾರ್ಥಿಸಿ, ''**ಅತೋ ದೇವಾ ಅವಂತು ನೋ ಯತೋ ವಿಷ್ಣುರ್ವಿಚಕ್ರಮೇ । ಪೃಥಿವ್ಯಾಃ ಸಪ್ತಧಾಮಭಿಃ**'' ಎಂಬ ಮಂತ್ರದಿಂದ ಸಮರ್ಪಣೆ ಮಾಡಬೇಕು. ಆಮೇಲೆ ಅರ್ಚನೆ ಮಂಗಲಾರತಿಯನ್ನು ಮಾಡಿ ಆ ಪವಿತ್ರವನ್ನು ಲಕ್ಷ್ಮೀ ವಾಯ್ವಾದಿಗಳಿಗೆ ಸಮರ್ಪಿಸಿ ಅದನ್ನು ತಾನು ಧರಿಸಬೇಕು. **ಧಾರಣಮಂತ್ರ: ಪವಿತ್ರಂ ವೈಷ್ಣವಂ ತೇಜಃ ಸರ್ವವಿಘ್ನನಿವಾರಣಮ್ । ಪೂಜಾಷಾಡ್ಗುಣ್ಯಸಿದ್ಧ್ಯರ್ಥಂ ಮಮಾಂಗೇ ಧಾರಯಾಮ್ಯಹಮ್ ॥**

ಗೋಕುಲಾಷ್ಟಮೀ

ಶ್ರಾವಣ ಕೃಷ್ಣ ಅಷ್ಟಮೀ ಪ್ರಾತಃ **ಅದ್ಯ ಸ್ಥಿತ್ವಾನಿರಾಹಾರಃ ಶ್ವೋಭೂತೇ ಪರಮೇಶ್ವರ। ಭೋಕ್ಷ್ಯಾಮಿ ಪುಂಡರೀಕಾಕ್ಷ ಹ್ಯಸ್ಮಿನ್ ಕೃಷ್ಣಾಷ್ಟಮೀದಿನೇ ॥** ಈ ಶ್ಲೋಕದಿಂದ ದೇವರ ಹತ್ತಿರ ಸಂಕಲ್ಪಿಸಬೇಕು. ಆಮೇಲೆ ತಾನು ''ಯೋಗಾಯ ಯೋಗಪತಯೇ ಯೋಗೇಶ್ವರಾಯ ಯೋಗಸಂಭವಾಯ ಶ್ರೀಗೋವಿಂದಾಯ ನಮೋ ನಮಃ'' ಎಂಬ ಮಂತ್ರದಿಂದ ಸ್ನಾನಮಾಡಿ, ನಿತ್ಯಾಹ್ನಿಕ ಮುಗಿಸಿ, ಸಾಯಂ ಪುನಃ ಹಿಂದೆ ಹೇಳಿದ ಮಂತ್ರದಿಂದ ಸ್ನಾನಮಾಡಿ ಪೂಜೆಮಾಡಬೇಕು. **ಯಜ್ಞಾಯ ಯಜ್ಞಪತಯೇ ಯಜ್ಞೇಶ್ವರಾಯ ಯಜ್ಞ ಸಂಭವಾಯ ಶ್ರೀಗೋವಿಂದಾಯ ನಮೋ ನಮಃ ॥** ಎಂಬ ಮಂತ್ರದಿಂದ ಕೃಷ್ಣನನ್ನು ಪೂಜಿಸಬೇಕು. ಆಮೇಲೆ ಬಲರಾಮ, ವಸುದೇವ, ದೇವಕೀ, ನಂದ, ಯಶೋದಾ, ಸುಭದ್ರಾ ಇವರೆಲ್ಲರನ್ನೂ ಪೂಜಿಸಬೇಕು. ಬಳಿಕ ರಾತ್ರಿ ಪಂಚಾಂಗದಲ್ಲಿ ಹೇಳಿದ ಪ್ರಕಾರ ಚಂದ್ರೋದಯವಾದಮೇಲೆಅರ್ಘ್ಯವನ್ನುಕೊಡಬೇಕು.**ಕೃಷ್ಣನಅರ್ಘ್ಯಮಂತ್ರ: ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ । ಕೌರವಾಣಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ ॥ ಪಾಂಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ । ಗೃಹಾಣಾರ್ಘ್ಯಂ ಮಯಾ ದತ್ತಂ ದೇವಕ್ಯಾ ಸಹಿತೋ ಹರೇ ॥ ಚಂದ್ರನ ಅರ್ಘ್ಯಮಂತ್ರ: ಕ್

ಮಾಸಧರ್ಮಗಳು...

ಶಶಿನ್॥ **ಪೂಜೆ ಮುಗಿಸಿ ಮಲಗುವಾಗ ಹೇಳುವ ಮಂತ್ರ:** ''ವಿಶ್ವಾಯ ವಿಶ್ವಪತಯೇ ವಿಶ್ವೇಶ್ವರಾಯ ವಿಶ್ವಸಂಭವಾಯ ಶ್ರೀಗೋವಿಂದಾಯ ನಮೋ ನಮಃ'' **ಮರುದಿನ ದಾನ ಮಾಡಬೇಕು. ಪಾರಣಮಂತ್ರ** – ''ಸರ್ವಾಯ ಸರ್ವಪತಯೇ ಸರ್ವೇಶ್ವರಾಯ ಸರ್ವಸಂಭವಾಯ ಶ್ರೀಗೋವಿಂದಾಯ ನಮೋ ನಮಃ'' **ಪಾರಣಾನಂತರ**– ''ಧರ್ಮಾಯ ಧರ್ಮಪತಯೇ ಧರ್ಮೇಶ್ವರಾಯ ಧರ್ಮಸಂಭವಾಯ ಶ್ರೀಗೋವಿಂದಾಯ ನಮೋ ನಮಃ'' ಎಂದು ಹೇಳಿ ಸಮರ್ಪಿಸಬೇಕು.

ಸಂತಾನಗೋಪಾಲಕೃಷ್ಣಮಂತ್ರ: **ದೇವಕೀಸುತಗೋವಿಂದ ದೇವದೇವ ಜಗತ್ಪತೇ । ದೇಹಿ ಮೇ ತನಯಂ ಕೃಷ್ಣ ತ್ವಾಮಹಂ ಶರಣಂ ಗತಃ ॥** (ಪುರುಷ–''ಗತಃ''ಸ್ತ್ರೀ ''ಗತಾ''ಎನ್ನಬೇಕು) ಸದಾಚಾರನಿಷ್ಠ ವಿದ್ವಾಂಸರಿಂದ ಉಪದೇಶಪಡೆದುಕೊಂಡೇ ಜಪಿಸಬೇಕು. ಉಪದೇಶವಿಲ್ಲದೆ ಈ ಮಂತ್ರವನ್ನು ಜಪಿಸಬಾರದು.

ಭಾದ್ರಪದ ಮಾಸ

ಪರಿವರ್ತಿನೀ ಏಕಾದಶೀ

ಈ ದಿನ ಮಲಗಿದ ಭಗವಂತನು ಮಗ್ಗಲು ಬದಲಾಯಿಸುತ್ತಾನೆ. ಕಾರಣ ಅಂದು ದೇವರಿಗೆ ಪೂಜೆಯ ನಂತರ ಪರಿವರ್ತನೋತ್ಸವವನ್ನು ಮಾಡಬೇಕು. ಪ್ರಾರ್ಥನೆ: **ವಾಸುದೇವ ಜಗನ್ನಾಥ ಪ್ರಾಪ್ತೇಯಂ ದ್ವಾದಶೀ ತವ । ಪಾರ್ಶ್ವೇನ ಪರಿವರ್ತಸ್ವ ಸುಖಂ ಸ್ವಪಿಹಿ ಮಾಧವ ॥**

ವಿಷ್ಣುಪಂಚಕವ್ರತಮ್

(1)ವಿಷ್ಣುಪಂಚಕವ್ರತವನ್ನು ಭಾದ್ರಪದ–ಮಾರ್ಗಶೀರ್ಷ ಶುದ್ಧ ದಶಮಿಯಂದು ಪುಣ್ಯಾಹವಾಚನವನ್ನು ಮಾಡಿಕೊಂಡು ಪ್ರಾರಂಭಿಸಬೇಕು. (2) ವೇಧಾದಿದೋಷಗಳಿಂದ ವಿಷ್ಣುಪಂಚಕವ್ರತಾಭಾವವೆಂದು ಪಂಚಾಂಗದಲ್ಲಿ ಸೂಚಿಸಿದ್ದರೆ ವರ್ಷಕ್ಕೆ 60 ಉಪವಾಸವಾಗುವದಿಲ್ಲ . ಆಗ ಮುಂದಿನ ವರ್ಷದಲ್ಲಿ ಆ ಉಪವಾಸಗಳನ್ನು ಮಾಡಿ 60ಸಂಖ್ಯೆಯನ್ನು ಪೂರೈಸಬೇಕಾಗಿಲ್ಲ. ಆದರೆ ರೋಗ ಅಥವಾ ಅನಾನುಕೂಲತೆಯಿಂದಾಗಿ ಉಪವಾಸಲೋಪವಾದರೆ ಮುಂದಿನ ವರ್ಷದಲ್ಲಿ ಆಯಾ ಉಪವಾಸಗಳನ್ನು ಮಾಡಿ ಪೂರ್ಣಗೊಳಿಸಬೇಕು. **ಅರ್ಘ್ಯ ಮತ್ತು ದೇವತೆಗಳು: 1) ಶುದ್ಧದ್ವಾದಶೀ** 1 ಕೇಶವಾಯ ...ದಾಮೋದರಾಯ (12 ನಾಮತರ್ಪಣ) ನಮಃ ಇದಮರ್ಘ್ಯಂ ಸಮರ್ಪಯಾಮಿ. **2) ಕೃಷ್ಣದ್ವಾದಶೀ** – 2 ಸಂಕರ್ಷಣಾಯ ... ಶ್ರೀಕೃಷ್ಣಾಯ (12 ನಾಮತರ್ಪಣ) ನಮಃ ಇದಮರ್ಘ್ಯಂ ಸಮರ್ಪಯಾಮಿ. **3) ಪೌರ್ಣಿಮಾ:** 1.ವಿಧವೇ ನಮಃ 2. ಶಶಿನೇ 3. ಶಶಾಂಕಾಯ 4. ಚಂದ್ರಾಯ 5. ಸೋಮಾಯ 6. ಉಡುಪಾಯ 7. ಅಮೃತಾಯ 8. ಮನೋಹರಾಯ 9. ಪಾವನಾಯ 10. ಹಿಮಕೃತೇ 11. ನಿಶಾಕೃತೇ 12. ದೀಪ್ಯಮಾನಾಯ ನಮಃ ಇದಮರ್ಘ್ಯಂ ಸಮರ್ಪಯಾಮಿ. **4) ಅಮಾವಾಸ್ಯಾ:** 1. ಮಹೀಧರಾಯ 2.ಜಗನ್ನಾಥಾಯ 3.ದೇವೇಂದ್ರಾಯ 4. ದೇವಕೀಸುತಾಯ 5.ಚತುರ್ಭುಜಾಯ 6. ಗದಾಪಾಣಯೇ 7. ಸುರಮೀಢಾಯ 8.ಸುಲೋಚನಾಯ 9. ಚಾರ್ವಂಗಾಯ 10.ಚಕ್ರಪಾಣಯೇ 11. ಸುರಮಿತ್ರಾಯ 12. ಅಸುರಾಂತಕಾಯ ನಮಃ ಇದಮರ್ಘ್ಯಂ ಸಮರ್ಪಯಾಮಿ. **5) ಶ್ರವಣ:** 1. ಪುರುಷೋತ್ತಮಾಯ 2. ಶಾರ್ಙ್ಗಧನ್ವಿನೇ 3. ಗರುಡಧ್ವಜಾಯ 4. ಅನಂತಾಯ 5. ಗೋವರ್ಧನಾಯ 6. ಪುಂಡರೀಕಾಕ್ಷಾಯ 7. ನಿತ್ಯಾಯ 8. ವೇದಗರ್ಭಾಯ 9. ಯಜ್ಞಪುರುಷಾಯ 10. ಸುಬ್ರಹ್ಮಣ್ಯಾಯ 11. ಜಯಾಯ 12. ಶೌರಯೇ ನಮಃ ಇದಮರ್ಘ್ಯಂ ಸಮರ್ಪಯಾಮಿ.

ಜ್ಯೇಷ್ಠಾಗೌರೀಪೂಜಾ

ಅನೇಕ ಜನ ಜ್ಯೇಷ್ಠಾದೇವಿಯೆಂದರೆ ಅಲಕ್ಷ್ಮೀ (ಕಲಿಯ ಹೆಂಡತಿ) ಎಂದು ತಿಳಿದಿದ್ದಾರೆ. ಅದು ತಪ್ಪು. ಜ್ಯೇಷ್ಠಾದೇವಿಯ ವ್ರತವು ಎರಡು ರೀತಿಯಾದದ್ದು. 1) ಭಾದ್ರ. ಶು. ಅಷ್ಟಮೀ ತಿಥಿಯಲ್ಲಿ ಆಚರಿಸುವಂತಹದು. 2)ಜ್ಯೇಷ್ಠಾನಕ್ಷತ್ರದ ಯೋಗದೊಂದಿಗೆ ಅಷ್ಟಮೀಯಲ್ಲಿ ಆಚರಿಸುವಂತಹದ್ದು. ಭಾದ್ರ. ಶು. ಅಷ್ಟಮೀದಿನ ಪೂಜೆಮಾಡುವ ಈ ದೇವಿಯು ರುದ್ರದೇವರ ಪತ್ನೀ ಪಾರ್ವತೀ. ಇನ್ನು ಜ್ಯೇಷ್ಠಾನಕ್ಷತ್ರದೊಂದಿಗೆ ಅಷ್ಟಮೀ ತಿಥಿಯಲ್ಲಿ ಆಚರಿಸುವ ವ್ರತಕ್ಕೆ ಮಹಾಲಕ್ಷ್ಮಿಯು ದೇವತೆ. ಇದಕ್ಕೆ ಸ್ಪಷ್ಟ ಪ್ರಮಾಣವಿದೆ.

ಆಶ್ವಿನ ಮಾಸ

ನವರಾತ್ರ–ಘಟಸ್ಥಾಪನಾಕ್ರಮ

ಆಶ್ವಿನಶುದ್ಧ ಪ್ರತಿಪದಾದಂದು (ಅವರವರ ಸಂಪ್ರದಾಯಕ್ಕೆ ಅನುಗುಣವಾಗಿ 9, 7, 5, 3 ದಿನ) ದೇವರ ಮನೆಯಲ್ಲಿ ಘಟಸ್ಥಾಪನೆಯನ್ನು ಮಾಡಿ ಕುಲದೇವರ ಪೂಜೆಯನ್ನು ಮಾಡಬೇಕು. ''**ಮಹೀ ದ್ಯೌಃ ಪೃಥಿವೀ ಚ ನ ಇಮಂ ಯಜ್ಞಂ ಮಿಮಿಕ್ಷತಾಮ್ । ಪಿಪೃತಾಂ ನೋ ಭರೀಮಭಿಃ ॥** ಭೂಮಿಯನ್ನು ಮುಟ್ಟಬೇಕು. ಶುದ್ಧನೆಲದಮೇಲೆ (ಅಥವಾ ಬುಟ್ಟಿಯಲ್ಲಿ) ಶುದ್ಧವಾದ ಮೃತ್ತಿಕೆಯನ್ನು ಹಾಕಿ, ''**ಓಷಧಯಃ ಸಂ ವದಂತೇ ಸೋಮೇನ ಸಹ ರಾಜ್ಞಾ। ಯಸ್ಮೈ ಕೃಣೋತಿ ಬ್ರಾಹ್ಮಣಸ್ತಂ ರಾಜನ್ ಪಾರಯಾಮಸಿ ॥**'' ಧಾನ್ಯವನ್ನು ಅಂಕುರ ಬೆಳೆಯುವಂತೆ ಹಾಕಿ,''**ಆ ಕಲಶೇಷು ಧಾವತಿ ಪವಿತ್ರೇ ಪರಿ ಷಿಚ್ಯತೇ। ಉಕ್ಥ್ಯರ್ಯಜ್ಞೇಷು ವರ್ಧತೇ ॥**'' ಕಲಶವನ್ನು ಇಟ್ಟು, ''**ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ । ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥** ನೀರು ತುಂಬಿ, ''**ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರಿಷಿಣೀಮ್ ।ಈಶ್ವರೀಂ ಸರ್ವಭೂತಾನಾಂತಾಮಿಹೋಪಹ್ವಯೇಶ್ರಿಯಮ್॥**ಗಂಧವನ್ನು ಹಾಕಿ,''**ಯಾಃ ಫಲಿನೀರ್ಯಾ ಅಫಲಾ ಅಪುಷ್ಪಾ ಯಾಶ್ಚ ಪುಷ್ಪಿಣೀಃ । ಬೃಹಸ್ಪತಿಪ್ರಸೂತಾಸ್ತಾ ನೋ ಮುಂಚಂತ್ವಂಹಸಃ ॥** ಅಡಿಕೆಯನ್ನು ಹಾಕಿ, ''**ಸ ಹಿ ರತ್ನಾನಿ ದಾಶುಷೇ ಸುವಾತಿ ಸವಿತಾ ಭಗಃ । ತಂ ಭಾಗಂ ಚಿತ್ರಮೀಮಹೇ ॥** ರತ್ನವನ್ನು, ''**ಹಿರಣ್ಯರೂಪಃ ಸ ಹಿರಣ್ಯಸಂದೃಗಪಾಂ ನಪಾತ್ ಸೇದು ಹಿರಣ್ಯವರ್ಣಃ । ಹಿರಣ್ಯಯಾತ್ ಪರಿ ಯೋನೇರ್ನಿಷದ್ಯಾ ಹಿರಣ್ಯದಾ ದದತ್ಯನ್ನಮಸ್ಮೈ ।** ಹಿರಣ್ಯವನ್ನು, ''**ಯುವಾ ಸುವಾಸಾಃ ಪರೀವೀತ ಆಗಾತ್ ಸ ಉ ಶ್ರೇಯಾನ್ ಭವತಿ ಜಾಯಮಾನಃ । ತಂ ಧೀರಾಸಃ ಕವಯ ಉನ್ನಯಂತಿ ಸ್ವಾಧ್ಯೋ ಮನಸಾ ದೇವಯಂತಃ ॥** ದಾರದಿಂದ ಸುತ್ತಿ, ''**ತತ್ ತ್ವಾ ಯಾಮಿ ಬ್ರಹ್ಮಣಾ ವಂದಮಾನಸ್ತದಾ ಶಾಸ್ತೇ ಯಜಮಾನೋ ಹವಿರ್ಭಿಃ । ಅಹೇಳಮಾನೋ ವರುಣೇಹ ಬೋಧ್ಯುರುಶಂಸ ಮಾ ನ ಆಯುಃ ಪ್ರ ಮೋಷೀಃ ॥** ವರುಣನನ್ನು ಪೂಜಿಸಿ, ಅದರಮೇಲೆ ಕುಲದೇವತೆಯನ್ನಿಟ್ಟು ಪೂಜಿಸಬೇಕು.

ದೀಪಸ್ತಂಭಸ್ಥಾಪನಾ

ನವರಾತ್ರಿಯಲ್ಲಿ ಅಖಂಡವಾಗಿ 9,7,5,3 ದಿನಗಳಲ್ಲಿ ದೇವರ ಮುಂದೆ ತುಪ್ಪದ ದೀಪವನ್ನು ಹಚ್ಚಬೇಕು. ದೇವರ ಮುಂದೆ ದೀಪಸ್ತಂಭವನ್ನು ಇಟ್ಟು ಆ ಸ್ತಂಭಕ್ಕೆ ಹೂವಿನ ಹಾರವನ್ನು ಸುತ್ತಿ ಸ್ತಂಭದ ಮೇಲ್ಭಾಗದಲ್ಲಿ ಕೃತ್ತಿಕಾದಿ 27ನಕ್ಷತ್ರಗಳನ್ನು ಆವಾಹಿಸಿ, ನಾಲದಲ್ಲಿ ''**ವಾಸುಕಿನೇ ನಮಃ**'' ಎಂದು ವಾಸುಕಿಯನ್ನು ಆವಾಹಿಸಿ ತುಪ್ಪದಲ್ಲಿ ಲಕ್ಷ್ಮೀದೇವಿಯನ್ನು ಚಿಂತಿಸುತ್ತಾ ''**ಅಗ್ನಿನಾಗ್ನಿಃ ಸಮಿಧ್ಯತೇ ಕರ್ವಿರ್ಗೃಹಪತಿರ್ಯುವಾ । ಹವ್ಯವಾಟ್ ಜುಹ್ವಾಸ್ಯಃ ॥** ಎಂದು ದೀಪವನ್ನು ಹಚ್ಚಬೇಕು. 9ದಿನಗಳ ವರೆಗೆ ದೀಪವು ಶಾಂತವಾಗದಂತೆ ಎಚ್ಚರಿಕೆ ವಹಿಸಬೇಕು.

ಸರಸ್ವತೀಪೂಜಾ

ವೇದ,ಭಾರತ,ಭಾಗವತ,ಸರ್ವಮೂಲ,ಸುಧಾದಿಗ್ರಂಥಗಳನ್ನುಮಂಟಪದಲ್ಲಿ ಇಟ್ಟುವೇದವ್ಯಾಸದೇವರನ್ನು ಮತ್ತು ಪರಶುರಾಮದೇವರನ್ನು ಪೂಜಿಸಬೇಕು. ಜೊತೆಗೆ ವ್ಯಾಸರ ಶಿಷ್ಯರಾದ ಬಾದರಿ, ಜೈಮಿನಿ, ಸುಮಂತು, ವೈಶಂಪಾಯನ, ಆಶ್ಮರಥ್ಯ, ಪೈಲ, ಕಾಶಕೃತ್ಸ್ನ, ಲೋಮಶ ಎಂಬ ಋಷಿಗಳನ್ನೂ ಪೂಜಿಸಬೇಕು. ಆವರಣಪೂಜೆ ಮಾಡುವವರು ಇಂದ್ರಾದಿಲೋಕಪಾಲಕರ (ಕೊನೆಯ) ಆವರಣಕ್ಕಿಂತಲೂ ಮೊದಲು ಈ ಋಷಿಗಳನ್ನು ಆವಾಹಿಸಿ ಪೂಜಿಸಬೇಕು.

ವಿಜಯದಶಮೀ

ಈ ದಿನ ಸುಗಂಧದ್ರವ್ಯಗಳಿಂದ ದೇವರಿಗೆ ವಿಶೇಷ ಅಭಿಷೇಕಾದಿಗಳನ್ನು ಮಾಡಬೇಕು. ಮಹಾಪುಣ್ಯಸಾಧನ. ಅಲ್ಲದೇ ಈ ದಿನ ಕೊಡುವ ದಾನ ಕೋಟಿ ಪಟ್ಟು ಹೆಚ್ಚಿನ ಪುಣ್ಯಪ್ರದವಾಗುವುದು. **ಶಮೀಪ್ರಾರ್ಥನೆ: ಅಮಂಗಲಾನಾಂ ಶಮನೀಂ ಶಮನೀಂ ದುಷ್ಕೃತಸ್ಯ ಚ । ದುಸ್ವಪ್ನನಾಶಿನೀಂ ಧನ್ಯಾಂ ಪ್ರಪದ್ಯೇಽಹಂ ಶಮೀಂ ಶುಭಾಮ್ । ಶಮಿ ಶಮಯ ಮೇ ಪಾಪಂ ಶಮಿ ಶತ್ರುವಿನಾಶಿನಿ । ಅರ್ಜುನಸ್ಯ ಧನುರ್ಧಾರಿ ರಾಮಸ್ಯ ಪ್ರಿಯದರ್ಶಿನಿ ॥**

ಕೋಜಾಗರವ್ರತ

ಆಶ್ವಿನ ಶುದ್ಧ ಪೂರ್ಣಿಮಾ ರಾತ್ರಿ ಲಕ್ಷ್ಮೀ– ಇಂದ್ರರನ್ನು ಅಕ್ಕಿಯಲ್ಲಿ **'ಲಕ್ಷ್ಮೀ ನಮಃ' 'ಇಂದ್ರಾಯ ನಮಃ'** ಎಂದು ಬರೆದು,ಷೋಡಶೋಪಚಾರಗಳಿಂದ ಮನಸಾ ಪೂಜಿಸಿ, **ನಮಸ್ತೇ ಸರ್ವದೇವಾನಾಂ ವರದಾಸಿ ಹರಿಪ್ರಿಯೇ । ಯಾ ಗತಿಸ್ತ್ವಾಂ ಪ್ರಪನ್ನಾನಾಂ ಸಾ ಮೇ ಭೂಯಾತ್ ತ್ವದರ್ಚನಾತ್ ॥** ಎಂದು ಮಹಾಲಕ್ಷ್ಮಿಗೆ, **ವಿಚಿತ್ರೈರಾವತಸ್ಥಾಯ ಭಾಸ್ವತ್ಕುಲಿಶಪಾಣಯೇ । ಪೌಲೋಮ್ಯಾಲಿಂಗಿತಾಂಗಾಯ ಸಹಸ್ರಾಕ್ಷಾಯ ತೇ ನಮಃ** ಈ ಮಂತ್ರದಿಂದ ಇಂದ್ರನಿಗೆ ಪುಷ್ಪವನ್ನರ್ಪಿಸಬೇಕು.

ದೀಪೋತ್ಸವ

ಅದ್ಯ ದೀಪೋತ್ಸವಂ ದೇವ ಕರಿಷ್ಯೇ ತ್ವತ್ ಪ್ರಸಾದತಃ । ನಿರ್ವಿಘ್ನಂ ಸಿದ್ಧಿಮಾಯಾತು ಯಥೋಕ್ತಫಲದೋ ಭವ ॥ ಎಂದು ಸಂಕಲ್ಪಿಸಿ ಮಣ್ಣಿನ, ಅಥವಾ ತಾಮ್ರ, ಕಬ್ಬಿಣ, ಕಂಚು, ಬೆಳ್ಳಿ, ಸುವರ್ಣದ ಪ್ರಣತಿಗಳಲ್ಲಿ ಗೋಘೃತ ದಿಂದ ಅಥವಾ ಎಣ್ಣೆಯಿಂದ ದೀಪಹಚ್ಚಬೇಕು. ಮಣ್ಣಿನದಕ್ಕಿಂತಲೂ ಕಬ್ಬಿಣಕ್ಕೆ ನೂರುಪಟ್ಟು ಹೆಚ್ಚು ಪುಣ್ಯ. ತಾಮ್ರಕ್ಕೆ ಕಂಚಿಗೆ ಸಾವಿರ, ರಜತಕ್ಕೆ ಲಕ್ಷ, ಸುವರ್ಣಕ್ಕೆ ಅನಂತ ಪಟ್ಟು ಹೆಚ್ಚಿನ ಫಲ. **ದೀಪಮಂತ್ರ: ಸ್ನೇಹಂ ದೀಪೋ ಯಥಾ ಧೃತ್ವಾ ಸರ್ವಲೋಕೋ ಪಕಾರಕಃ । ತಥಾ ಭವಾನ್ಮಮ ಜ್ಞಾನಂ ಹೃದಿ ಧಾರಯ ಸಂತತಮ್॥**

ಗೋವತ್ಸದ್ವಾದಶೀ

ಆಶ್ವಿನ ಕೃಷ್ಣ ದ್ವಾದಶೀದಿನ ಸವತ್ಸಾ ಗೋವನ್ನು ಗಂಧಾದಿಗಳಿಂದ, ಪೂಜಿಸಿ ಪುಷ್ಪ–ಅಕ್ಷತ–ತಿಲಗಳಿಂದ ಅರ್ಘ್ಯ ಕೊಡಬೇಕು.

ಮಂತ್ರ: ''**ಕ್ಷೀರೋದಾರ್ಣವಸಂಭೂತೇ ಸುರಾಸುರನಮಸ್ಕೃತೇ। ಸರ್ವದೇವಮಯೇ ಮಾತರ್ಗೃಹಾಣಾರ್ಘ್ಯಂ ನಮೋ ನಮಃ ॥ ಸುರಭಿ ತ್ವಂ ಜಗನ್ಮಾತಃ ದೇವಿ ವಿಷ್ಣುಪದೇ ಸ್ಥಿತಾ । ಸರ್ವದೇವಮಯೇ ಗ್ರಾಸಂ ಮಯಾ ದತ್ತಮಿಮಂ ಗ್ರಸ ॥ ತತಃ ಸರ್ವಮಯೇ ದೇವಿ ಸರ್ವದೇವೈರಲಂಕೃತೇ । ಮಾತರ್ಮಮಾಭಿಲಷಿತಂ ಸಫಲಂ ಕುರು ನಂದಿನಿ ॥** ಎಂದು ಪ್ರಾರ್ಥಿಸಬೇಕು.

ಯಮದೀಪದಾನ

ಆಶ್ವಿನಕೃಷ್ಣತ್ರಯೋದಶೀದಿನಸಾಯಂಕಾಲ ಯಮನಪ್ರೀತ್ಯರ್ಥ ದೀಪವನ್ನು ಹಚ್ಚಬೇಕು. **ಮೃತ್ಯುನಾ ಪಾಶದಂಡಾಭ್ಯಾಂ ಕಾಲೇನ ಶ್ಯಾಮಲಾಯುತಃ । ತ್ರಯೋದಶ್ಯಾಂ ದೀಪದಾನಾತ್ ಸೂರ್ಯಜಃ ಪ್ರೀಯತಾಂ ಮಮ ॥**

ನರಕಚತುರ್ದಶೀ

ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿದ ದಿನವಿದು. ಈದಿನ ಚಂದ್ರೋದಯ ಕಾಲಕ್ಕೆ ಸ್ತ್ರೀಯರು ಮನೆಯ ಎಲ್ಲ ಜನರಿಗೆ ಆರತಿ ಮಾಡಬೇಕು. ಎಲ್ಲರು ಅಭ್ಯಂಗಸ್ನಾನವನ್ನು ಮಾಡಬೇಕು. ಯತಿಗಳಿಗೂ ವಿಧವೆಯರಿಗೂ ಈ ವಿಧಿಯಿದೆ.

ಯಮತರ್ಪಣಮ್: ನರಕಚತುರ್ದಶೀದಿವಸ ದಕ್ಷಿಣಕ್ಕೆ ಮುಖಮಾಡಿ ತಂದೆ ಇಲ್ಲದವರು ಅಪಸವ್ಯದಿಂದ ಅಥವಾ ಸವ್ಯದಿಂದ ಎಳ್ಳಿನಿಂದ ತರ್ಪಣಕೊಡಬೇಕು. ತಂದೆ ಇದ್ದವರು ಸವ್ಯದಿಂದ, ಅಕ್ಕಿಯಿಂದ ತರ್ಪಣಕೊಡಬೇಕು. ''**ಯಮಂ ತರ್ಪಯಾಮಿ, ಧರ್ಮಂ..,ಮೃತ್ಯುಂ.., ಅಂತಕಂ.., ವೈವಸ್ವತಂ.., ಕಾಲಂ.., ಸರ್ವಭೂತಕ್ಷಯಂ.., ಔದುಂಬರಂ.., ದಧ್ನಂ.., ನೀಲಂ.., ಪರಮೇಷ್ಠಿನಂ.., ವೃಕೋದರಂ.., ಚಿತ್ರಂ.., ಚಿತ್ರಗುಪ್ತಂ ತರ್ಪಯಾಮಿ.**

ಕಾರ್ತಿಕ ಮಾಸ

ಲಕ್ಷಬತ್ತಿ

ಕಾರ್ತಿಕದಲ್ಲಿ ಸಾವಿರಪಟ್ಟು, ಮಾಘದಲ್ಲಿ ಲಕ್ಷಪಟ್ಟು, ವೈಶಾಖದಲ್ಲಿ ಕೋಟಿಪಟ್ಟು ಹೆಚ್ಚು ಪುಣ್ಯ. ಪ್ರಾರ್ಥನೆ: **ಲಕ್ಷವರ್ತಿವ್ರತಂ ದೇವ ಸ್ವೀಕೃತಂ ಪುರತೋ ತವ । ನಿರ್ವಿಘ್ನಂ ಸಿದ್ಧಿಮಾಯಾತು ಸಾಂಗಂ ಕುರು ದಯಾನಿಧೇ ॥**

ಬಲಿಪ್ರತಿಪದಾ

ಭೂಮಿಯಲ್ಲಿ ಬಲಿಯ ಚಿತ್ರವನ್ನು 5 ಬಣ್ಣಗಳಿಂದ ಬರೆದು ಫಲಪುಷ್ಪಗಳಿಂದ ಪೂಜಿಸಬೇಕು. **ಬಲಿರಾಜ ನಮಸ್ತುಭ್ಯಂ ದೈತ್ಯದಾನವವಂದಿತ । ಇಂದ್ರಶತ್ರೋ ಅಮರಾರಾತೇ ವಿಷ್ಣುಸಾನ್ನಿಧ್ಯದೋ ಭವ ॥**

ಭಾವಬಿದಿಗೆ

ಅಣ್ಣನಿಗೆ ಊಟಹಾಕುವಾಗ ತಂಗಿ ಹೇಳುವ ಶ್ಲೋಕ – **'ಭ್ರಾತಸ್ತವಾನುಜಾತಾಹಂ' ಭುಂಕ್ಷ್ವ ಭಕ್ಷ್ಯಮಿದಂ ಶುಭಮ್ । ಪ್ರೀತಯೇ ಯಮರಾಜಸ್ಯ ಯಮುನಾಯಾಃ ವಿಶೇಷತಃ ॥** ಅಕ್ಕ ಇದ್ದರೆ 'ಭ್ರಾತಸ್ತವಾಗ್ರಜಾತಾಹಂ' ಎಂದು ಹೇಳಬೇಕು.

ಉತ್ಥಾನದ್ವಾದಶೀ

ದಾಮೋದರನನ್ನು ಹಾಗೂ ತುಲಸಿಯನ್ನು ಕ್ರಮವಾಗಿ ಷೋಡಶೋಪಚಾರಗಳಿಂದ ಪೂಜಿಸಿ, ತುಲಸಿಯನ್ನು ಆಭರಣಗಳಿಂದ ಅಲಂಕರಿಸಿ, ವಾದ್ಯಘೋಷಗಳಿಂದ ದೇವರನ್ನು ಎಬ್ಬಿಸಬೇಕು. **ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ । ಸಮೂಳ್ಹಮಸ್ಯ ಪಾಂಸುರೇ''**ಎಂಬ ಮಂತ್ರವನ್ನು ಅನ್ನಬೇಕು. ಮತ್ತು ''**ಇಯಂ ಚ ದ್ವಾದಶೀ ದೇವ ಪ್ರಬೋಧಾರ್ಥಂ ವಿನಿರ್ಮಿತಾ । ತ್ವಯೈವ ಸರ್ವಲೋಕಾನಾಂ ಹಿತಾರ್ಥಂ ಶೇಷಶಾಯಿನಾ ॥ ಉತ್ತಿಷ್ಠೋತ್ತಿಷ್ಠ ಗೋವಿಂದ ತ್ಯಜ ನಿದ್ರಾಂ ಜಗತ್ಪತೇ । ತ್ವಯಿ ಸುಪ್ತೇ ಜಗತ್ಸುಪ್ತಂ ಉತ್ಥಿತೇ ಚೋತ್ಥಿತಂ ಭವೇತ್ ॥ ''ಚರಣಂ ಪವಿತ್ರಂ ವಿತತಂ ಪುರಾಣಂ ಯೇನ ಪೂತಸ್ತರತಿ ದುಷ್ಕೃತಾನಿ''** ಎಂದು ತುಲಸಿಯನ್ನು ಸಮರ್ಪಿಸಬೇಕು. ''**ಗತಾ ಮೇಘಾ ವಿಯಚ್ಚೈವ ನಿರ್ಮಲಾ ನಿರ್ಮಲಾ ದಿಶಃ । ಶಾರದಾನಿ ಚ ಪುಷ್ಪಾಣಿ ಗೃಹಾಣ ಮಮ ಕೇಶವ''** ॥ ಎಂದು ಪುಷ್ಪವನ್ನು ಸಮರ್ಪಿಸಬೇಕು .

ತುಲಸೀವಿವಾಹ

ಕೃಷ್ಣ–ತುಲಸಿಯರನ್ನು ಪರಸ್ಪರ ಎದುರಿಗೆ ನಿಲ್ಲಿಸಿ ಅಂತಃಪಟ ಹಿಡಿದು, ಮಂಗಲಾಷ್ಟಕದಿಂದ ಅಕ್ಷತೆ ಹಾಕಿ, ''**ದೇವೀಂ ಕನಕಸಂಪನ್ನಾಂ ಕನಕಾಭರಣೈರ್ಯುತಾಮ್ । ದಾಸ್ಯಾಮಿ ವಿಷ್ಣವೇ ತುಭ್ಯಂ ಬ್ರಹ್ಮಲೋಕ ಜಿಗೀಷಯಾ ॥ ''ಮಯಾ ಸಂವರ್ಧಿತಾಂ ಯಥಾಶಕ್ತ್ಯಲಂಕೃತಾಂ ಇಮಾಂ ತುಲಸೀಂ ದೇವೀಂ ದಾಮೋದರಾಯ ತುಭ್ಯಮಹಂ ಸಂಪ್ರದದೇ''** ಎಂದು ದೇವರ ಎದುರಿನಲ್ಲಿ ಅಕ್ಷತೆ ಸಹಿತನೀರು ಬಿಡಬೇಕು.ಕೃಷ್ಣನಿಗೆ ಮಂಗಲಸೂತ್ರ ಮುಟ್ಟಿಸಿ ತುಲಸಿಗೆ ಕಟ್ಟಬೇಕು. 15 ನೆಲ್ಲಿಕಾಯಿ ಮೇಲೆ ಹೂಬತ್ತಿ ಇಟ್ಟು ಆರತಿ ಮಾಡಬೇಕು.

ಭೀಷ್ಮಪಂಚಕ

ಕಾರ್ತಿಕ ಶು.ಏಕಾದಶೀ ದಿನ ಪ್ರಾರಂಭಿಸಬೇಕು. ಗೋಮಯದಿಂದ ಸ್ನಾನ ಮಾಡಿ ದೇವರನ್ನು ಪೂಜಿಸಿ ವಾಸುದೇವ ಮಂತ್ರವನ್ನು 108 ಸಲ ಜಪಿಸಬೇಕು. ದ್ವಾದಶಿಯಿಂದ ಹುಣ್ಣಿಮೆಯವರೆಗೆ ''**ವಿಷ್ಣವೇ ನಮಃ**'' ಎಂಬ ಮಂತ್ರದಿಂದ 108 ಸಲ ತುಪ್ಪದಿಂದ ಹೋಮ ಮಾಡಬೇಕು. ಪ್ರತಿನಿತ್ಯ ಒಂದೊಂದು ಹೂವಿನಿಂದ ದೇವರ ಒಂದೊಂದು ಅಂಗವನ್ನು ಪೂಜಿಸಬೇಕು.

ದಿನ	1	2	3	4	5
ಪುಷ್ಪ	ಕಮಲ	ಬಿಲ್ವಪತ್ರ	ಭೃಂಗರಾಜ	ಕರವೀರ	ಚಂಪಕ
ದೇವರ ಅಂಗ	ಪಾದ	ಮೊಣಕಾಲು	ನಾಭಿ	ಸ್ಕಂಧ	ಮುಖ
ಆಹಾರ	--	ಗೋಮಯ ಗೋಮೂತ್ರ	ಕ್ಷೀರ	ದಧಿ	ತುಪ್ಪ

ಕೊನೆಯ ದಿನ ಪೂರ್ಣಿಮೆಯಂದು ಬೆಳಿಗ್ಗೆ ಉದ್ಯಾಪನಾಂಗತ್ವೇನ ಪೂಜೆ, ಹೋಮ, ಬ್ರಾಹ್ಮಣಭೋಜನಗಳನ್ನು ಮುಗಿಸಿ ಸಾಯಂಕಾಲ 5 ಹೂಗಳಿಂದ ಭಗವಂತನ ಸಮಗ್ರ ಪ್ರತಿಮೆಯನ್ನು ಪೂಜಿಸಬೇಕು. ಭೀಷ್ಮರಿಗೆ ಅರ್ಘ್ಯವನ್ನು ಕೊಟ್ಟು ನಕ್ಷತ್ರವನ್ನು ಕಂಡಮೇಲೆ ಪಾರಣೆ ಮಾಡಬೇಕು.

ಭೀಷ್ಮಾರ್ಘ್ಯ ಮಂತ್ರ: ಸತ್ಯವ್ರತಾಯ ಶುಚಯೇ ಗಾಂಗೇಯಾಯ ಮಹಾತ್ಮನೇ। ಭೀಷ್ಮಾಯ ತದ್ದದಾಮ್ಯರ್ಘ್ಯಂ ಆಜನ್ಮಬ್ರಹ್ಮಚಾರಿಣೇ ॥

ಮಾರ್ಗಶೀರ್ಷ / ಪೌಷ ಮಾಸ

ಧನುರ್ಮಾಸ

ಧನುರಾಶಿಯಲ್ಲಿ ಸೂರ್ಯನ ಪ್ರವೇಶದಿನದಿಂದ ಮಕರಸಂಕ್ರಮಣದ ವರೆಗೆ ಧನುರ್ಮಾಸ ಎಂದು ಹೆಸರು. ಸೂರ್ಯೋದಯಕ್ಕಿಂತ ಮೊದಲಿನ 2

ಮಾಸಧರ್ಮಗಳು...

ಘಂಟೆ ಉಷಃಕಾಲ. ಆಗ ಸ್ನಾನಮಾಡಿ,ಆಹ್ನಿಕ ಮುಗಿಸಿ,ದೇವರ ಪೂಜೆಯನ್ನು ಮಾಡಿ ಹುಗ್ಗಿಯ (ಹೆಸರುಬೆಳೆ, ಅಕ್ಕಿ) ನೈವೇದ್ಯ ತೋರಿಸಬೇಕು. ಇದರಿಂದ ಸಕಲಮನೋರಥಗಳು ಪೂರ್ಣವಾಗುತ್ತವೆ. ಮಾಡದೆ ಇದ್ದರೆ 7 ಜನ್ಮಗಳಲ್ಲಿ ದರಿದ್ರನೂ, ಕ್ಷಯರೋಗಿಯೂ, ಮೂರ್ಖನೂ ಆಗುವನು. ಈ ಪೂಜೆಯನ್ನು 1 ದಿನ ಮಾಡಿದರೂ ಸಹಸ್ರವರ್ಷಪೂಜೆಮಾಡಿದ ಫಲದೊರೆಯುವದು. ಈ ಮಾಸದಲ್ಲಿ ಲಕ್ಷ್ಮ್ಯಷ್ಟೋತ್ತರವನ್ನು ಪಠಿಸಬೇಕು- ''**ಶ್ರೀದೇವೀ ಪ್ರಥಮಂ ನಾಮ ದ್ವಿತೀಯಮಮೃತೋದ್ಭವಾ । ತೃತೀಯಂ ಕಮಲಾ ಪ್ರೋಕ್ತಾ ಚತುರ್ಥಂ ಚಂದ್ರಲೋಚನಾ ॥ ಪಂಚಮಂ ವಿಷ್ಣುಪತ್ನೀತಿ ಷಷ್ಠಂ ಶ್ರೀವೈಷ್ಣವೀತಿ ಚ । ಸಪ್ತಮಂ ತು ವರಾರೋಹಾ ಅಷ್ಟಮಂ ಹರಿವಲ್ಲಭಾ ॥ ನವಮಂ ಶಾರ್ಙ್ಗಿಣೀ ಪ್ರೋಕ್ತಾ ದಶಮಂ ದೇವದೇವಿಕಾ । ಏಕಾದಶಂ ಮಹಾಲಕ್ಷ್ಮೀಃ ದ್ವಾದಶಂ ಲೋಕಸುಂದರೀ ॥ ಶ್ರೀಃ ಪದ್ಮಾ ಕಮಲಾ ಮುಕುಂದಮಹಿಷೀ ಲಕ್ಷ್ಮ್ಯಸ್ತ್ರಿಲೋಕೇಶ್ವರೀ । ಮಾ ಕ್ಷೀರಾಬ್ಧಿಸುತಾಽರವಿಂದಜನನೀ ವಿದ್ಯಾ ಸರೋಜಾತ್ಮಿಕಾ ॥ ಸರ್ವಾಭೀಷ್ಟಫಲಪ್ರದೇತಿ ಸತತಂ ನಾಮಾನಿ ಯೋ ದ್ವಾದಶ ಪ್ರಾತಃ ಶುದ್ಧತರಾ ಪಠಂತಿ ಸತತಂ ಸರ್ವಾನ್ ಲಭಂತೇ ಶುಭಾನ್ ॥ ಭದ್ರಲಕ್ಷ್ಮ್ಯಸ್ತವಂ ನಿತ್ಯಂ ಪುಣ್ಯಮೇತಚ್ಛುಭಾವಹಮ್ । ತೌಲೇ ಸ್ನಾತ್ವಾಽಪಿ ಕಾವೇರ್ಯಾಂ ಜಪೇತ್ ಶ್ರೀವೃಕ್ಷಸನ್ನಿಧೌ ॥** ನಕ್ಷತ್ರವಿದ್ದಾಗ ಪೂಜೆ ಮಾಡಿದರೆ ಉತ್ತಮ, ನಕ್ಷತ್ರ ಅಸ್ತವಾದ ಮೇಲೆ ಮಧ್ಯಮ, ಸೂರ್ಯೋದಯ ಕಾಲದಲ್ಲಿ ಅಧಮ.

ಹುಗ್ಗಿ ಮಾಡುವ ವಿಧಾನ		ಅಕ್ಕಿ	ಹೆಸರುಬೇಳೆ
	ಉತ್ತಮ	ಕಡಿಮೆ	ಹೆಚ್ಚು
	ಮಧ್ಯಮ	ಸಮ	ಸಮ
	ಅಧಮ	ಹೆಚ್ಚು	ಕಡಿಮೆ

ಧನುರ್ವ್ಯತೀಪಾತಯೋಗ

ಧನುರ್ಮಾಸದಲ್ಲಿವ್ಯತೀಪಾತಯೋಗವು ಸಹಸ್ರ ಅರ್ಧೋದಯಕ್ಕೆ ಸಮಾನ. ಈ ದಿನ ಶ್ರಾದ್ಧ, ಪಿತೃತರ್ಪಣವನ್ನು ನೀಡಬೇಕು. ನೈವೇದ್ಯವನ್ನು ಮಾಡಿ ಭಗವಂತನಿಗೆ ಕೆಳಗಿನ ಮಂತ್ರಗಳಿಂದ ಅರ್ಘ್ಯವನ್ನು ನೀಡಬೇಕು. **ವ್ಯತೀಪಾತ ಮಹಾಸತ್ವ ಸರ್ವಪಾಪಪ್ರಣಾಶನ । ಸಹಸ್ರಬಾಹೋ ವಿಶ್ವಾತ್ಮನ್ ಗೃಹಾಣಾರ್ಘ್ಯಂ ನಮೋಽಸ್ತುತೇ ॥ ವ್ಯತೀಪಾತ ನಮಸ್ತೇಽಸ್ತು ನಮಸ್ತೇ ವಿಶ್ವಮಂಗಲ । ವಿಷ್ಣುಚಕ್ರಸ್ವರೂಪಾಯ ನಮಸ್ತೇ ದಿವ್ಯತೇಜಸೇ ॥** ಎಂದು ಅರ್ಘ್ಯವನ್ನು ನೀಡಿ ಪಿತೃತರ್ಪಣವನ್ನು ಕೊಟ್ಟು **ವಿಷ್ಣುಪ್ರಿಯ ವ್ಯತೀಪಾತ ಪಿತೄಣಾಂ ಅನೃಣಪ್ರದ । ಪಿತೄಣಾಂ ಮಮ ವೈಕುಂಠಂ ಪ್ರಯಚ್ಛ ಭಗವನ್ ಹರೇ ॥ ತತ್ತತ್ಪ್ರಸಾದೇನ ಮೇ ಭಕ್ತಿಃ ಅಸ್ತ್ವೇವಂ ಅನಪಾಯಿನೀ । ಜ್ಞಾನವಿಜ್ಞಾನ ವೈರಾಗ್ಯಂ ಪ್ರಯಚ್ಛ ಭಗವನ್ ಮಮ ॥** ಎಂದು ಪ್ರಾರ್ಥಿಸಬೇಕು.

ಚಂಪಾಷಷ್ಠೀ (ಸುಬ್ರಹ್ಮಣ್ಯ ಷಷ್ಠೀ)

ಈ ದಿನ ಸ್ಕಂದಾಂತರ್ಯಾಮಿಯಾದ ಭಗವಂತನನ್ನು ವಿಶೇಷವಾಗಿ ಪೂಜಿಸಿ ಬ್ರಹ್ಮಚಾರಿಗಳಿಗೆ ಭೋಜನ ವಸ್ತ್ರಾದಿಗಳನ್ನು ನೀಡಬೇಕು. ಉದ್ದಿನ ಪದಾರ್ಥವನ್ನು ನೈವೇದ್ಯ ಮಾಡಬೇಕು. ಸ್ಕಂದಮಂತ್ರ: **ಸೇನಾವಿದಾರಕ ಸ್ಕಂದ ಮಹಾಸೇನ ಮಹಾಬಲ । ರುದ್ರೋಮಾಗ್ನಿಜ ಷಡ್ವಕ್ತ್ರ ಗಂಗಾಗರ್ಭ ನಮೋಸ್ತುತೇ॥**

ಹನುಮದ್ವ್ರತ

ಹನುಮಂತದೇವರನ್ನು 13 ಗ್ರಂಥಿಗಳಿರುವ ದಾರದಲ್ಲಿ **ಓಂ ನಮೋ ವಾಯುನಂದನಾಯ ಓಂ** ಎಂದು ಆವಾಹಿಸಿ ಹನುಮಂತನನ್ನು ಪೂಜಿಸಿ ವಾಯನದಾನವನ್ನು ಕೊಡಬೇಕು. ಗೋದಿಯನ್ನು ವಿಶೇಷವಾಗಿ ದಾನಮಾಡಬೇಕು. **ಅರ್ಘ್ಯಮಂತ್ರ: ನಮಸ್ತೇ ವಾಯುಪುತ್ರಾಯ ಧ್ವಂಸಿತಾ ಮರವೈರಿಣೇ । ಸುಜನಾಂಬುಧಿಚಂದ್ರಾಯ ಭವಿಷ್ಯತ್‌ಬ್ರಹ್ಮಣೇ ನಮಃ ॥** ಶ್ರೀಹನುಮತೇ ನಮಃ ಇದಮರ್ಘ್ಯಂ ಸಮರ್ಪಯಾಮಿ.

ಮಾಘಸ್ನಾನ

(ಪೌಷ ಶು. ದಶಮೀ ಅಥವಾ ಪೂರ್ಣಿಮಾದಿಂದ ಪ್ರಾರಂಭಿಸಬೇಕು)

ಸಂಕಲ್ಪ: ಮಾಘಮಾಸಮಿಮಂ ಪೂರ್ಣಂ ಸ್ನಾಸ್ಯೇಽಹಂ ದೇವ ಮಾಧವ । ತೀರ್ಥಸ್ಯಾಸ್ಯ ಜಲೇ ನಿತ್ಯಮಿತಿ ಸಂಕಲ್ಪ್ಯ ಚೇತಸಿ ॥ ಆಚಮನ ಪ್ರಾಣಾಯಾಮ ಗಳನ್ನು ಮಾಡಿ ''ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀವಿಷ್ಣುಪ್ರೇರಣಯಾ ಶ್ರೀ ವಿಷ್ಣುಪ್ರೀತ್ಯರ್ಥಂ ಜ್ಞಾನಭಕ್ತಿವೈರಾಗ್ಯಸಿದ್ಧ್ಯರ್ಥಂ ಮಾಘಸ್ನಾನಂ ಅಹಂ ಕರಿಷ್ಯೇ'' ಎಂದು ಸಂಕಲ್ಪಿಸಿ, **ಸ್ನಾನಮಂತ್ರ: ದುಃಖದಾರಿದ್ಯನಾಶಾಯ ಶ್ರೀವಿಷ್ಣೋಸ್ತೋಷಣಾಯ ಚ । ಪ್ರಾತಃಸ್ನಾನಂ ಕರೋಮ್ಯದ್ಯ ಮಾಘೇ ಪಾಪವಿನಾಶನಮ್ ॥ ಮಕರಸ್ಥೇ ರವೌ ಮಾಘೇ ಗೋವಿಂದಾಚ್ಯುತ ಮಾಧವ । ಸ್ನಾನೇನಾನೇನ ಮೇ ದೇವ ಯಥೋಕ್ತಫಲದೋ ಭವ ॥ ಕೃಷ್ಣಾಚ್ಯುತ ನಿಮಜ್ಜಾಮಿ ಪ್ರಭಾತೇಽಸ್ಮಿನ್ ಶುಭೋದಕೇ । ಅನೇನ ಮಾಘಸ್ನಾನೇನ ಸುಪ್ರೀತೋ ಮಾಂ ಸಮುದ್ಧರ ॥ ಮಾಘಸ್ನಾನಂ ಕರಿಷ್ಯಾಮಿ ಮಕರಸ್ಥೇ ದಿವಾಕರೇ । ಅಸಮಾಪ್ತಿ ಮಹಾದೇವ ನಿರ್ವಿಘ್ನಂ ಕುರು ಮಾಧವ ॥** ಹೀಗೆ ಪ್ರಾರ್ಥಿಸಿ ನಿತ್ಯದ ಸ್ನಾನಾಂಗ ಅರ್ಘ್ಯ ತರ್ಪಣಗಳನ್ನು ಕೊಡುವುದಲ್ಲದೆ ವಿಶೇಷವಾಗಿ ಮಾಧವನಿಗೆ ಹಾಗೂ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು.

ಅರ್ಘ್ಯಮಂತ್ರ: ತಪಸ್ಯಕೋದಯೇ ನದ್ಯಾಂ ಸ್ನಾತೋಽಹಂ ವಿಧಿಪೂರ್ವಕಮ್ । ಮಾಧವಾಯ ದದಾಮೀದಂ ಅರ್ಘ್ಯಂ ಸಮ್ಯಕ್ ಪ್ರಸೀದತು ॥ ಮಾಧವಾಯ ನಮಃ ಇದಮರ್ಘ್ಯಂ ಸಮರ್ಪಯಾಮಿ । ಸವಿತ್ರೇ ಪ್ರಸವಿತ್ರೇ ಚ ಪರಧಾಮ್ನೇ ನಮೋಽಸ್ತು ತೇ । ತತ್ತೇಜಸಾ ಪರಿಭ್ರಷ್ಟಂ ಪಾಪಂ ಯಾತು ಸಹಸ್ರಧಾ ॥ ಸವಿತ್ರೇ ನಮಃ ಇದಮರ್ಘ್ಯಂ ಸಮರ್ಪಯಾಮಿ

ಸ್ನಾನಾನಂತರದಲ್ಲಿ: ದಿವಾಕರ ಜಗನ್ನಾಥ ಪ್ರಭಾಕರ ನಮೋಽಸ್ತು ತೇ । **ಪರಿಪೂರ್ಣಂ ಕುರುಷ್ವೇದಂ ಮಾಘಸ್ನಾನಂ ಮಯಾ ಕೃತಮ್ ॥** ಎಂದು ಸೂರ್ಯನನ್ನು ಪ್ರಾರ್ಥಿಸಬೇಕು.

ಮಾಘ ಮಾಸ

ರಥಸಪ್ತಮೀ

ಈ ದಿನ ಸೂರ್ಯೋದಯದೊಳಗೆ ಎಕ್ಕಿಎಲೆ ಸಹಿತವಾಗಿ ಸ್ನಾನಮಾಡಿ ಸೂರ್ಯನಿಗೆ ಅರ್ಘ್ಯ ಕೊಡಬೇಕು. **ಸ್ನಾನಮಂತ್ರ: ಯದ್ಯದ್‌ಜನ್ಮಕೃತಂ ಪಾಪಂ ಮಯಾ ಸಪ್ತಸು ಜನ್ಮಸು । ತನ್ಮೇ ರೋಗಂ ಚ ಶೋಕಂ ಚ ಮಾಕರೀ ಹಂತು ಸಪ್ತಮೀ ॥ ಏತಜ್ಜನ್ಮಕೃತಂ ಪಾಪಂ ಯಚ್ಚ ಜನ್ಮಾಂತರಾರ್ಜಿತಮ್ । ಮನೋವಾಕ್ಕಾಯಜಂ ಯಚ್ಚ ಜ್ಞಾತಾಜ್ಞಾತಂ ಚ ಯತ್ಪುನಃ ॥ ಇತಿ ಸಪ್ತವಿಧಂ ಪಾಪಂ ಸ್ನಾನಾನ್ಮೇ ಸಪ್ತ ಸಪ್ತಕೇ । ಸಪ್ತವ್ಯಾಧಿಸಮಾಯುಕ್ತಂ ಹರ ಮಾಕರಿ ಸಪ್ತಮಿ ॥**

ಅರ್ಘ್ಯಮಂತ್ರ: ಸಪ್ತಸಪ್ತಿವಹಪ್ರೀತ ಸಪ್ತಲೋಕಪ್ರದೀಪನ । ಸಪ್ತಮೀ ಸಹಿತೋ ದೇವ ಗೃಹಾಣಾರ್ಘ್ಯಂ ದಿವಾಕರ ॥ ಈ ಮಂತ್ರದಿಂದ ರಥಸಪ್ತಮೀದಿನ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು. ಈ ದಿನ ತುಲಸೀವೃಂದಾವನ ಅಥವಾ ದೇವರಮುಂದೆ ಏಳು ಕುದುರೆಯುಳ್ಳ ರಥವನ್ನು ಬರೆದು ಅದರಲ್ಲಿ ಸೂರ್ಯ-ನಾರಾಯಣನನ್ನು ಬರೆದು ಪೂಜಿಸಬೇಕು.

ಭೀಷ್ಮಾಷ್ಟಮೀ

ಈ ದಿನ ಭೀಷ್ಮರು ದೇಹತ್ಯಾಗಮಾಡಿದ ದಿನ. ಕಾರಣ ಇಂದು ಅವರಿಗೆ ತರ್ಪಣ ಹಾಗೂ ಅರ್ಘ್ಯವನ್ನು ನೀಡಬೇಕು. **ತರ್ಪಣ: ವೈಯಾಘ್ರಪದ್ಯಗೋತ್ರಾಯ ಸಾಂಕೃತ್ಯಪ್ರವರಾಯ ಚ । ಗಂಗಾಪುತ್ರಾಯ ಭೀಷ್ಮಾಯ ಆಜನ್ಮಬ್ರಹ್ಮಚಾರಿಣೇ । ಅಪುತ್ರಾಯ ಜಲಂ ದದ್ಮಿ ನಮೋ ಭೀಷ್ಮಾಯ ವರ್ಮಣೇ ॥ ಭೀಷ್ಮಃ ಶಾಂತನವೋ ವೀರಃ ಸತ್ಯವಾದೀ ಜಿತೇಂದ್ರಿಯಃ । ಆಭಿರದ್ಭಿರವಾಪ್ನೋತು ಪುತ್ರಪೌತ್ರೋಚಿತಾಂ ಕ್ರಿಯಾಮ್ ॥** ಎಂಬ ಮಂತ್ರದಿಂದ ಅಜೀವತ್ಪಿತೃಕರು ತಿಲೋದಕವನ್ನು ಅಪಸವ್ಯದಿಂದ, ಜೀವತ್ಪಿತೃಕರು ಸವ್ಯದಿಂದ ಯವೋದಕವನ್ನು ಕೊಡಬೇಕು. **ಅರ್ಘ್ಯ: ವಸೂನಾಮವತಾರಾಯ ಶಂತನೋರಾತ್ಮಜಾಯ ಚ । ಅರ್ಘ್ಯಂ ದದಾಮಿ ಭೀಷ್ಮಾಯ ಆಬಾಲಬ್ರಹ್ಮಚಾರಿಣೇ ॥**

ಮಾಘಮಾಸ ದಾನಗಳು

ಹಿರಣ್ಯತುಲಸೀ

ಸುವರ್ಣತುಲಸೀದಾನಾತ್ ಬ್ರಹ್ಮಣಃ ಕಾಯಸಂಭವಾತ್ । ಪಾಪಂ ಪ್ರಶಮಮಾಯಾತು ಸರ್ವೇ ಸಂತು ಮನೋರಥಾಃ ॥

ತಿಲಪಾತ್ರದಾನ

ಮಾಘಮಾಸದಲ್ಲಿ ತಾಮ್ರದ ಅಥವಾ ಕಂಚಿನ ಪಾತ್ರೆಯಲ್ಲಿ ಎಳ್ಳನ್ನು ತುಂಬಿ ಬ್ರಾಹ್ಮಣರಿಗೆ ದಾನ ಕೊಡಬೇಕು. **ತಿಲಾಃ ಪುಣ್ಯಾಃ ಪವಿತ್ರಾಶ್ಚ ಸರ್ವಪಾಪ ಹರಾಃ ಸ್ಮೃತಾಃ । ಶುಕ್ಲಾಶ್ಚೈವ ತಥಾ ಕೃಷ್ಣಾಃ ವಿಷ್ಣುಗಾತ್ರಸಮುದ್ಭವಾಃ ॥ ಯಾನಿ ಕಾನಿ ಚ ಪಾಪಾನಿ ಬ್ರಹ್ಮಹತ್ಯಾಸಮಾನಿ ಚ । ತಿಲಪಾತ್ರಪ್ರದಾನೇನ ತಾನಿ ನಶ್ಯಂತಿ ಮೇ ಸದಾ ॥ ಇದಂ ತಿಲಪಾತ್ರಂ ಯಮದೈವತ್ಯಂ ಬ್ರಹ್ಮಲೋಕಪ್ರಾಪ್ತಿಕಾಮಃ ತುಭ್ಯಂ ಅಹಂ ಸಂಪ್ರದದೇ ನ ಮಮ ನ ಮಮ ॥**

ಫಾಲ್ಗುಣ ಮಾಸ

ಪಯೋವ್ರತ (ಸಂತಾನಕ್ಕಾಗಿ)

ಕಶ್ಯಪರ ಉಪದೇಶದಂತೆ ಅವರ ಮಡದಿ ಅದಿತಿದೇವಿಯು ಈ ವ್ರತವನ್ನು ಮಾಡಿ ವಾಮನದೇವರನ್ನು ಪಡೆದಳು. ಶ್ರೀಮದಾಚಾರ್ಯರ ತಾಯಿಯೂ ಇದನ್ನು ಮಾಡಿದ್ದರು. ಸಂತಾನಕ್ಕಾಗಿ ಈ ವ್ರತವನ್ನು ಫಾಲ್ಗುನ ಶುದ್ಧ ಪ್ರತಿಪದಾದಿಂದ ತ್ರಯೋದಶೀವರೆಗೆ ಅವಶ್ಯವಾಗಿ ಆಚರಿಸಬೇಕು.

ಉಪಯುಕ್ತ ವಿಚಾರಗಳು

ಪಂಚಗವ್ಯಮೇಲನ-ಪ್ರಾಶನವಿಧಿ

ಗೋಮೂತ್ರವನ್ನು ಗಾಯತ್ರೀಮಂತ್ರದಿಂದ; ಗೋಮಯವನ್ನು, **ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ । ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥**; ಹಾಲನ್ನು, **ಆ ಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮ ವೃಷ್ಣ್ಯಮ್ । ಭವಾ ವಾಜಸ್ಯ ಸಂಗಥೇ ॥**; ಮೊಸರನ್ನು, **ದಧಿ ಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ । ಸುರಭಿ ನೋ ಮುಖಾ ಕರತ್ ಪ್ರಣ ಆಯೂಂಷಿ ತಾರಿಷತ್ ॥** ತುಪ್ಪವನ್ನು, **ಶುಕ್ರಮಸಿ ಜ್ಯೋತಿರಸಿ ತೇಜೋಽಸಿ ।** ಈ ಎಲ್ಲ ಮಂತ್ರಗಳಿಂದ ಮೇಲಿನ ಪದಾರ್ಥಗಳನ್ನು ಒಂದು ಪಾತ್ರೆಯಲ್ಲಿ ಹಾಕಿ, ''**ದೇವಸ್ಯ ತ್ವಾ ಸವಿತು ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಂ ಪ್ರತಿಗೃಹ್ಣಾಮಿ**'' ಎಂದು ದರ್ಭವನ್ನು ಕೈಯಲ್ಲಿ ಹಿಡಿದು, ''ಓಂ''ಕಾರವನ್ನು ಉಚ್ಚರಿಸುತ್ತ ಕಲಿಸಬೇಕು. **ಯತ್ತ್ವ ಗಸ್ಥಿಗತಂ ಪಾಪಂ ದೇಹೇ ತಿಷ್ಠತಿ ಮಾಮಕೇ । ಪ್ರಾಶನಂ ಪಂಚಗವ್ಯಸ್ಯ ದಹತ್ವಗ್ನಿರಿವೇಂಧನಮ್ ॥** ಎಂದು ಪ್ರಾಶನಮಾಡಿ ಆಚಮನ ಮಾಡಬೇಕು.

ಯಜ್ಞೋಪವೀತ ಧಾರಣವಿಧಿ

ಆಚಮನ, ಪ್ರಾಣಾಯಾಮ, ಸಂಕಲ್ಪ - **ಶ್ರೌತಸ್ಮಾರ್ತ ಕರ್ಮಾನುಷ್ಠಾನ ಯೋಗ್ಯತಾಸಿದ್ಧ್ಯರ್ಥಂ (ಜಾತಾಶೌಚ ಮೃತಾಶೌಚ ಶುದ್ಧ್ಯರ್ಥಂ) ಯಜ್ಞೋಪವೀತಧಾರಣಂ ಅಹಂ ಕರಿಷ್ಯೇ ।** ಎಂದು ಸಂಕಲ್ಪಮಾಡಿ ಯಜ್ಞೋಪವೀತದಲ್ಲಿ ಈ ದೇವತೆಗಳನ್ನು ಆವಾಹಿಸಬೇಕು. **ಓಂಕಾರಂ ಪ್ರಥಮತಂತೌ ನ್ಯಸಾಮಿ । ಅಗ್ನಿಂ ದ್ವಿತೀಯತಂತೌ ನ್ಯಸಾಮಿ । ನಾಗಾನ್ ತೃತೀಯತಂತೌ ನ್ಯಸಾಮಿ । ಸೋಮಂ ಚತುರ್ಥತಂತೌ ನ್ಯಸಾಮಿ । ಪಿತೄನ್ ಪಂಚಮತಂತೌ ನ್ಯಸಾಮಿ । ಪ್ರಜಾಪತಿಂ ಷಷ್ಠತಂತೌ ನ್ಯಸಾಮಿ । ವಾಯುಂ ಸಪ್ತಮತಂತೌ ನ್ಯಸಾಮಿ । ಸೂರ್ಯಂ ಅಷ್ಟಮತಂತೌ ನ್ಯಸಾಮಿ । ವಿಶ್ವಾನ್ ದೇವಾನ್ ನವಮತಂತೌ ನ್ಯಸಾಮಿ । ಋಗ್ವೇದಂ ಪ್ರಥಮದೋರಕೇ ನ್ಯಸಾಮಿ । ಯಜುರ್ವೇದಂ ದ್ವಿತೀಯದೋರಕೇ ನ್ಯಸಾಮಿ । ಸಾಮವೇದಂ ತೃತೀಯದೋರಕೇ ನ್ಯಸಾಮಿ । ಅಥರ್ವವೇದಂ ಗ್ರಂಥೌ ನ್ಯಸಾಮಿ ।** ಈ ದೇವತೆಗಳನ್ನು ಷೋಡಶೋಪಚಾರಗಳಿಂದ ಪೂಜಿಸಿ, 10 ಗಾಯತ್ರೀ ಜಪಮಾಡಿ, ''**ಉದು ತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ । ದೃಶೇ ವಿಶ್ವಾಯ ಸೂರ್ಯಮ್ ॥** ಎಂದು ಸೂರ್ಯನಿಗೆ ತೋರಿಸಿ, **ಯಜ್ಞೋಪವೀತಂ ಇತಿ ಮಂತ್ರಸ್ಯ ಪರಬ್ರಹ್ಮಾ ಋಷಿ, ಪರಮಾತ್ಮಾ ದೇವತಾ, ತ್ರಿಷ್ಟುಪ್ ಛಂದಃ ಯಜ್ಞೋಪವೀತಧಾರಣೇ ವಿನಿಯೋಗಃ । ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ । ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥** ಎಂಬ ಮಂತ್ರದಿಂದ ಧರಿಸಬೇಕು. ಅನಂತರ ಆಚಮನ, 10 ಗಾಯತ್ರೀಜಪಮಾಡಿ ಹಳೆಯ ಯಜ್ಞೋಪವೀತವನ್ನು ''**ಉಪವೀತಂ ಭಿನ್ನತಂತುಂ ಜೀರ್ಣಂ ಕಶ್ಮಲದೂಷಿತಮ್। ವಿಸೃಜಾಮಿ ಜಲೇ ಬ್ರಹ್ಮನ್ ವರ್ಚೋ ದೀರ್ಘಾಯುರಸ್ತು ಮೇ ॥**'' ಎಂದು ವಿಸರ್ಜಿಸಿ ಆಚಮನಮಾಡಬೇಕು. ಯಜ್ಞೋಪವೀತ ನಾಭಿಗಿಂತಲೂ ಮೇಲೆ (ಚಿಕ್ಕದಾಗಿದ್ದರೆ) ಆಯುಷ್ಯಹಾನಿ. ನಾಭಿಗಿಂತಲೂ ಕೆಳಗಾದರೆ ತಪೋನಾಶ. ಆದ್ದರಿಂದ ನಾಭಿಸಮವಿರಬೇಕು.(2,3 ಯಜ್ಞೋಪವೀತವನ್ನು ಧರಿಸುವವರು ಪ್ರತಿಯಜ್ಞೋಪವೀತಕ್ಕೂಪ್ರತ್ಯೇಕಗಾಯತ್ರೀಜಪಮಾಡಿಪ್ರತ್ಯೇಕವಾಗಿಮಂತ್ರ ಹೇಳಿ ಒಂದಾದಮೇಲೆ ಒಂದು ಧರಿಸಬೇಕು.)

ದಶಮೀ-ಏಕಾದಶೀ-ದ್ವಾದಶೀ ಸಂಕಲ್ಪ

ದಶಮೀ: ದಶಮೀದಿವಸೇ ಪ್ರಾಪ್ತೇ ವ್ರತಸ್ಥೋಽಹಂ ಜನಾರ್ದನ । ತ್ರಿದಿನಂ ದೇವ ದೇವೇಶ ನಿರ್ವಿಘ್ನಂ ಕುರು ಕೇಶವ ॥ ಏಕಾದಶೀ: ಏಕಾದಶ್ಯಾಂ ನಿರಾಹಾರಃ ಸ್ಥಿತ್ವಾಹಮಪರೇಽಹನಿ । ಭೋಕ್ಷ್ಯಾಮಿ ಪುಂಡರೀಕಾಕ್ಷ ಶರಣಂ ಮೇ ಭವಾಚ್ಯುತ ॥ ದ್ವಾದಶೀ ಪಾರಣೆಯ ನಂತರ - ಅಜ್ಞಾನತಿಮಿರಾಂಧಸ್ಯ ವ್ರತೇನಾನೇನ ಕೇಶವ । ಪ್ರಸನ್ನಸುಮುಖೋ ಭೂತ್ವಾ ಜ್ಞಾನದೃಷ್ಟಿಪ್ರದೋ ಭವ ॥ ಎಂದು ಪ್ರಾರ್ಥಿಸಿ, **ಏಕಾದಶ್ಯುಪವಾಸೇನ ದ್ವಾದಶ್ಯಾಂ ಪಾರಣೇನ ಚ । ಯದಾರ್ಜಿತಂ ಮಯಾ ಪುಣ್ಯಂ ತೇನ ಪ್ರೀಣಾತು ಕೇಶವಃ ॥** ಎಂದು ಸಮರ್ಪಿಸಬೇಕು.

ಶ್ರಾದ್ಧ ವಿಚಾರ

ವಿವಾಹಾನಂತರ ಪಿಂಡಪ್ರದಾನ- ಮಕ್ಕಳ ವಿವಾಹವಾದ ಮೇಲೆ 3 ಅಥವಾ 1 ತಿಂಗಳೊಳಗೆ ಪಿಂಡಪ್ರದಾನ ಮಾಡಬಾರದು ಎನ್ನುವದು ತಂದೆ-ತಾಯಿಗಳ ಶ್ರಾದ್ಧದ ಹೊರತಾಗಿ ಬೇರೆ ಶ್ರಾದ್ಧಗಳಿಗೆ ಮಾತ್ರ ಅನ್ವಯಿಸುತ್ತದೆ. ವಿವಾಹದ ಹಿಂದೆ ಎಷ್ಟೇ ದಿನದ ಅಂತರದಲ್ಲೂ ಪಿಂಡಪ್ರದಾನ ಮಾಡಬಹುದು. ವಿವಾಹದ ನಂತರ ತಂದೆ ತಾಯಿಗಳ ಶ್ರಾದ್ಧವು ಎಷ್ಟೇ ದಿನಗಳ ಅಂತರದಲ್ಲಿದ್ದರೂ ಅವಶ್ಯವಾಗಿ ಪಿಂಡಪ್ರದಾನವನ್ನೇ ಮಾಡಬೇಕು. **ಶ್ರಾದ್ಧತಿಥಿ ಅಜ್ಞಾತವಾಗಿದ್ದರೆ** - ಬಳಗದವರ ಮುಖಾಂತರ ಮೃತರಾದವರ ಮಾಸ, ತಿಥಿ, ಗೊತ್ತಾಗುವದು ಸಾಧ್ಯವಿಲ್ಲದಿದ್ದರೆ ಮಾರ್ಗಶೀರ್ಷ ಅಥವಾ ಮಾಘ ಅಮಾವಾಸ್ಯಾ ಅಥವಾ ದ್ವಾದಶೀ ದಿವಸ ಶ್ರಾದ್ಧವನ್ನು ಮಾಡಬೇಕು.

ಅಮಾವಾಸ್ಯಾ (ದರ್ಶ)

ದರ್ಶದ ದಿವಸ ದ್ವಾದಶ ಪಿತೃಗಳಿಗೆ ಮಾತ್ರ ತಿಲ (ಎಳ್ಳು) ಸಹಿತ ನೀರಿನಿಂದ ತರ್ಪಣ ಕೊಡಬೇಕು. ನಂತರ ಪ್ರತಿನಿತ್ಯದ ಬ್ರಹ್ಮಯಜ್ಞವನ್ನು ದೇವ-ಋಷಿ-ಆಚಾರ್ಯತರ್ಪಣವನ್ನು ಕೊಟ್ಟು ಆಮೇಲೆ ಕೇವಲ ನೀರಿನಿಂದ ಸರ್ವಪಿತೃಗಳಿಗೆ ತರ್ಪಣ ಕೊಡಬೇಕು. ಅಮಾವಾಸ್ಯಾ (ದರ್ಶ) ದಿನದಲ್ಲಿ ಕೇವಲ ದ್ವಾದಶ ಪಿತೃತರ್ಪಣ ಕೊಡಬೇಕು. ಬ್ರಹ್ಮಯಜ್ಞದಲ್ಲಿ ಸರ್ವಪಿತೃತರ್ಪಣ ಕೊಡಬೇಕು.

ರಜಸ್ವಲಾ ವಿಚಾರ

ರಜೋದರ್ಶನನಿರ್ಣಯ- ಸೂರ್ಯಾಸ್ತದಿಂದಸೂರ್ಯೋದಯದವರೆಗಿನ ಕಾಲವನ್ನು ಮೂರುಭಾಗ ಮಾಡಿ ಅದರಲ್ಲಿ ಮೊದಲಿನ ಎರಡು ಅಂಶಗಳಲ್ಲಿ ರಜೋದರ್ಶನವಾದರೆ ಹಿಂದಿನ ದಿನವೆಂದು ಪರಿಗಣಿಸಬೇಕು. ಮೂರನೆಯ ಭಾಗದಲ್ಲಿಯಾದರೆ ಎರಡನೆಯ ದಿನವೆಂದು ಪರಿಗಣಿಸಬೇಕು.

ರಜಸ್ವಲಾ ಆಶೌಚ ವಿಚಾರ- ರೋಗದಿಂದಾಗಿ ಸ್ತ್ರೀಯರಲ್ಲಿ ರಜಸ್ಸು ಕಂಡರೆ ಅಶುಚಿಯಿಲ್ಲ. ಕ್ರಮವಾಗಿ ತಿಂಗಳಿಗೊಮ್ಮೆ ರಜಸ್ವಲೆಯಾದರೆ ಮೂರುದಿನ ಮೈಲಿಗೆ ಆಚರಿಸಬೇಕು. ರಜಸ್ವಲೆಯಾದ ದಿನದಿಂದ 18 ದಿನದೊಳಗೆ ಪುನಃ ರಜಸ್ವಲೆಯಾದರೆ ಸ್ನಾನಮಾತ್ರ. ರಜಸ್ವಲೆಯಾದ ದಿನದಿಂದ 18ನೇ ದಿನದಂದು ಪುನಃ ರಜಸ್ವಲೆಯಾದರೆ 1 ದಿನ ಮಾತ್ರ ಅಶುದ್ಧಿ. ರಜಸ್ವಲೆಯಾದ ದಿನದಿಂದ 19 ನೇ ದಿನ ಪುನಃ ರಜಸ್ವಲೆಯಾದರೆ ಎರಡು ದಿನ ಮಾತ್ರ ಅಶುದ್ಧಿ. ರಜಸ್

ಅಶೌಚ ನಿರ್ಣಯ

ಜನನಾಶೌಚ (ವೃದ್ಧಿ)ನಿರ್ಣಯ

ಪ್ರಥಮದಿನ ನಿರ್ಣಯ

ರಾತ್ರಿಯಲ್ಲಿ ಜನನ, ಮರಣ ಅಥವಾ ರಜೋದರ್ಶನವಾದರೆ ರಾತ್ರಿಮಾನವನ್ನು 3 ಭಾಗ ಮಾಡಿ ಮೊದಲಿನ ಎರಡು ಭಾಗಗಳು ಪೂರ್ವದಿವಸವೆಂತಲೂ, ಕಡೆಯ ಭಾಗವು ಮರುದಿನವೆಂದೂ ತಿಳಿಯಬೇಕು.

ಗರ್ಭಸ್ರಾವವಾದರೆ

	ತಾಯಿಗೆ	ಪಿತ್ರಾದಿ ಎಲ್ಲ ಸಪಿಂಡರಿಗೆ
ಮೊದಲಿನ 3 ತಿಂಗಳಲ್ಲಿ	3 ದಿವಸ	ಸ್ನಾನದಿಂದ ಶುದ್ಧಿ.
4ನೆಯ ತಿಂಗಳಲ್ಲಿ	4 ದಿವಸ ರಜಸ್ವಲಾ ಅಶೌಚವು	

ಗರ್ಭಪಾತವಾದರೆ

	ತಾಯಿಗೆ	ಪಿತ್ರಾದಿ ಎಲ್ಲ ಸಪಿಂಡರಿಗೆ
5ನೆ, 6 ನೆ ತಿಂಗಳಲ್ಲಿ	5-6 ದಿನ ರಜಸ್ವಲಾ ಅಶೌಚವು	3 ದಿನ ಜನನಾಶೌಚ (ವೃದ್ಧಿ) ಮಾತ್ರ. ಮರಣಾಶೌಚವಿಲ್ಲ.

ಪ್ರಸವ

	ತಾಯಿಗೆ	ಪಿತ್ರಾದಿ ಎಲ್ಲ ಸಪಿಂಡರಿಗೆ
7ನೇ ತಿಂಗಳಾರಭ್ಯ ಪ್ರಸವವಾದರೆ	10 ದಿವಸ ಜನನಾಶೌಚವು (ವೃದ್ಧಿ).	
ಮರಣಹೊಂದಿ ಜನನವಾದರೆ	10 ದಿವಸ ಜನನಾಶೌಚವು(ವೃದ್ಧಿ) ಮರಣಾಶೌಚವಿಲ್ಲ.	
ಜನನವಾಗಿ ನಾಲಚ್ಟೇದನಕ್ಕಿಂತ ಮೊದಲು ಮೃತವಾದರೆ	10 ದಿವಸ	3 ದಿವಸ ಜನನಾಶೌಚವು (ವೃದ್ಧಿ)ಮರಣಾಶೌಚವಿಲ್ಲ.
ನಾಲಚ್ಟೇದನಾನಂತರ 10 ದಿವಸದೊಳಗೆ ಶಿಶು ಮೃತವಾದರೆ	10 ದಿವಸ ಜನನಾಶೌಚ (ವೃದ್ಧಿ) ಮರಣಾಶೌಚವಿಲ್ಲ.	

ಪ್ರಸವ

	ತಂದೆ, ತಾಯಿಗೆ	ಅದೆ ಮನೆಯಲ್ಲಿ ವಾಸಿಸುವ ಅಣ್ಣ-ತಮ್ಮಂದಿರಿಗೆ ಹಾಗೂ ಚಿಕ್ಕಪ್ಪ ಮೊದಲಾದವರಿಗೆ
ತಂದೆಯ ಮನೆಯಲ್ಲಿ ಮಗಳು ಹೆತ್ತರೆ	3 ದಿವಸ ಜನನಾಶೌಚ (ವೃದ್ಧಿ)	1 ದಿವಸ ಜನನಾಶೌಚ (ವೃದ್ಧಿ).
ಗಂಡನ ಮನೆಯಲ್ಲಿ ಮಗಳು ಹೆತ್ತರೆ	ತಂದೆ-ತಾಯಿ ಮೊದಲಾದವರಿಗೆ ಜನನಾಶೌಚ (ವೃದ್ಧಿ) ಇಲ್ಲ.	

ಮರಣಾಶೌಚ (ಸೂತಕ)ನಿರ್ಣಯ

ಸಣ್ಣಮಕ್ಕಳ ಮರಣವಾದಾಗ ದಹನ-ಖನನ ವಿಚಾರ

ಯಾವಾಗ	ಏನು
ನಾಮಕರಣಕ್ಕಿಂತಲೂ ಮೊದಲು (12 ದಿನದೊಳಗೆ)	ಖನನವನ್ನೇ ಮಾಡಬೇಕು. (ಹೂಳಬೇಕು)
12 ದಿವಸಾನಂತರ 3 ವರ್ಷದವರೆಗೆ	ದಹನ / ಖನನ ಮಾಡಬಹುದು.
1 ವರ್ಷದಲ್ಲಿಯೇ ಚೌಲವಾಗಿದ್ದರೆ	ದಹನವನ್ನೇ ಮಾಡಬೇಕು.
3 ವರ್ಷದ ನಂತರ ಚೌಲಸಂಸ್ಕಾರ ಆಗಿರಲಿ ಆಗದೆ ಇರಲಿ	ದಹನವನ್ನೇ ಮಾಡಬೇಕು.

1) ಅನುಪನೀತ ಗಂಡು ಮಗ

	ಯಾರಿಗೆ	ಎಷ್ಟು ಅಶೌಚ
10,11,12 ದಿನಗಳಲ್ಲಿ ಮೃತನಾದರೆ	ತಂದೆ-ತಾಯಿ-ಮಲತಾಯಿ	3 ದಿನ
	ಇತರ ಸಪಿಂಡರಿಗೆ	ಸ್ನಾನ
12 ದಿನದ ನಂತರ 7 ತಿಂಗಳವರೆಗೆ	ತಂದೆ-ತಾಯಿ-ಮಲತಾಯಿ (ದಹನ- ಖನನ ಎರಡೂ)	3 ದಿನ
	ಸಪಿಂಡರಿಗೆ (ದಹನ ಪಕ್ಷದಲ್ಲಿ)	1 ದಿನ
	ಸಪಿಂಡರಿಗೆ (ಖನನ ಪಕ್ಷದಲ್ಲಿ)	ಸ್ನಾನ
7 ತಿಂಗಳ ನಂತರ 1 ವರ್ಷದವರೆಗೆ ಚೂಡಾ ಸಂಸ್ಕಾರವಾಗಿದ್ದರೆ	ತಂದೆ-ತಾಯಿ-ಮಲತಾಯಿ, ಇತರ ಸಪಿಂಡರಿಗೆ	3 ದಿನ
7 ತಿಂಗಳ ನಂತರ 3 ವರ್ಷದವರೆಗೆ ಚೂಡಾ ಸಂಸ್ಕಾರ ಇಲ್ಲದಿದ್ದಾಗ	ತಂದೆ-ತಾಯಿ-ಮಲತಾಯಿ	3 ದಿನ
	ಇತರ ಸಪಿಂಡರಿಗೆ	1 ದಿನ
3 ವರ್ಷಾನಂತರ ಉಪನಯನಕ್ಕಿಂತ ಮೊದಲು	ತಂದೆ-ತಾಯಿ-ಮಲತಾಯಿ, ಸಪಿಂಡರಿಗೆ (ಚೌಲವಾಗಿರಲಿ-ಆಗದಿರಲಿ)	3 ದಿನ
ಅನುಪನೀತ ಮಗನ ಮರಣವಾರ್ತೆ 10 ದಿನದ ನಂತರ ತಿಳಿದರೆ	ತಂದೆ-ತಾಯಿ-ಮಲತಾಯಿ, ಇತರ ಸಪಿಂಡರಿಗೆ	ಅಶೌಚವಿಲ್ಲ

2)ಉಪನೀತ ಗಂಡುಮಗ

	ಯಾರಿಗೆ	ಎಷ್ಟು ಅಶೌಚ
	ತಂದೆ-ತಾಯಿ-ಮಲತಾಯಿ	10 ದಿನ
	ಇತರ ಸಪಿಂಡರಿಗೆ	
ಮರಣ ವಾರ್ತೆ 10 ದಿನದ ನಂತರ ತಿಳಿದರೆ	ತಂದೆ-ತಾಯಿ-ಮಲತಾಯಿ	3 ದಿನ
	ಸಪಿಂಡರಿಗೆ	ಸ್ನಾನ

3)ಹೆಣ್ಣುಮಗಳು

ಯಾವಾಗ	ಯಾರಿಗೆ	ಎಷ್ಟು ಅಶೌಚ
10 ದಿನದ ನಂತರ	ತಂದೆ-ತಾಯಿ-ಮಲತಾಯಿ	1 ದಿನ
6 ತಿಂಗಳ ವರೆಗೆ	ಸಪಿಂಡರಿಗೆ (3 ತಲೆಯವರೆಗೆ)	ಸ್ನಾನ
6 ತಿಂಗಳ ನಂತರ	ತಂದೆ-ತಾಯಿ-ಮಲತಾಯಿ	3 ದಿನ
3 ವರ್ಷದ ವರೆಗೆ	ಸಪಿಂಡರಿಗೆ (3 ತಲೆಯವರೆಗೆ)	ಸ್ನಾನ
3 ವರ್ಷದ ನಂತರ ವಿವಾಹಕ್ಕಿಂತೂ ಮೊದಲು ವಾಗ್ದಾನವಾಗದಿದ್ದರೆ	ತಂದೆ-ತಾಯಿ-ಮಲತಾಯಿ	3 ದಿನ
	ಸಪಿಂಡರಿಗೆ (3 ತಲೆಯವರೆಗೆ)	1 ದಿನ
ವಾಗ್ದಾನವಾಗಿದ್ದರೆ	ತಂದೆ-ತಾಯಿ-ಮಲತಾಯಿ ಸಪಿಂಡರಿಗೆ	3 ದಿನ
	ನಿಶ್ಚಯವಾದ ಗಂಡು-ಅವನ ತಂದೆ-ತಾಯಿ-ಸಪಿಂಡರಿಗೆ	3 ದಿನ

3) ಹೆಣ್ಣು ಮಗಳ ವಿವಾಹವಾದ ಮೇಲೆ

ಯಾರಿಗೆ (ಗಂಡನ ಮನೆಯಲ್ಲಿ)	ಎಷ್ಟು ಅಶೌಚ
ಗಂಡನಿಗೆ, ಗಂಡನ ಸಪಿಂಡರಿಗೆ	10 ದಿನ
ತಂದೆ-ತಾಯಿ-ಮಲತಾಯಿ	3 ದಿನ
ಅಣ್ಣ-ತಮ್ಮ, ಮಲ ಅಣ್ಣ-ತಮ್ಮ	ಪಕ್ಷಿಣೀ
ಕಾಕಾ ಮೊದಲಾದ ಸಪಿಂಡರಿಗೆ	1 ದಿನ
ಯಾರಿಗೆ (ತಂದೆಯ ಮನೆಯಲ್ಲಿ)	**ಎಷ್ಟು ಅಶೌಚ**
ತಂದೆ-ತಾಯಿ-ಮಲತಾಯಿ, ಅಣ್ಣ-ತಮ್ಮ, ಮಲ ಅಣ್ಣ-ತಮ್ಮ	3 ದಿನ
ಕಾಕಾ ಮೊದಲಾದವರಿಗೆ	1 ದಿನ
ಯಾರಿಗೆ (ಗ್ರಾಮಾಂತರದಲ್ಲಿ)	**ಎಷ್ಟು ಅಶೌಚ**
ತಂದೆ-ತಾಯಿ-ಮಲತಾಯಿ	ಪಕ್ಷಿಣೀ
ಕಾಕಾ ಮೊದಲಾದವರಿಗೆ	1 ದಿನ

4) ತಂದೆ-ತಾಯಿ-ಮಲತಾಯಿ

ಯಾವಾಗ	ಯಾರಿಗೆ	ಎಷ್ಟು ಅಶೌಚ
	ಉಪನೀತ-ಅನುಪನೀತ ಮಗ, ಅವಿವಾಹಿತ ಮಗಳಿಗೆ	10 ದಿನ
	ವಿವಾಹಿತ ಮಗಳಿಗೆ	3 ದಿನ
10 ದಿನದ ನಂತರ, ವರ್ಷ ಆದ ಮೇಲೆ ತಿಳಿದರೂ	ಮಗನಿಗೆ , ಉಳಿದವರಿಗೆ	10 ದಿನ
	ವಿವಾಹಿತ ಮಗಳಿಗೆ	ಪಕ್ಷಿಣೀ
3 ದಿನದ ನಂತರ 10 ದಿನದೊಳಗೆ ತಿಳಿದರೆ	ವಿವಾಹಿತ ಮಗಳಿಗೆ	3 ದಿನ

5) ತಂದೆಯ ತಂದೆ ಮತ್ತು ಕಾಕಾ

ಯಾವಾಗ	ಯಾರಿಗೆ	ಎಷ್ಟು ಅಶೌಚ
	ವಿವಾಹಿತ ಮೊಮ್ಮಗಳಿಗೆ	ಸ್ನಾನ
	ವಿವಾಹಿತ ಮಗಳಿಗೆ	

6) ಅಣ್ಣ-ತಮ್ಮ

ಎಲ್ಲಿ	ಯಾರಿಗೆ	ಎಷ್ಟು ಅಶೌಚ
ಅಕ್ಕ-ತಂಗಿಯರ ಮನೆಯಲ್ಲಿ ಮೃತರಾದರೆ	ಅಕ್ಕ-ತಂಗಿಯರಿಗೆ	3 ದಿನ
ಬೇರೆ ಮನೆಯಲ್ಲಿ		ಪಕ್ಷಿಣೀ
ಗ್ರಾಮಾಂತರ		1 ದಿನ
ಅನುಪನೀತನಾಗಿದ್ದರೆ		ಸ್ನಾನ

ಇದೇ ರೀತಿ ಮಲ ಅಣ್ಣ, ತಮ್ಮಂದಿರ ಬಗ್ಗೆ ತಿಳಿಯಬೇಕು.

7) ವಿವಾಹಿತ ಅಕ್ಕ-ತಂಗಿಯರು

ಎಲ್ಲಿ	ಯಾರಿಗೆ	ಎಷ್ಟು ಅಶೌಚ
ಅಣ್ಣ-ತಮ್ಮಂದಿರ ಮನೆಯಲ್ಲಿ	ಉಪನೀತ ಅಣ್ಣ-ತಮ್ಮಂದಿರಿಗೆ	3 ದಿನ
ಬೇರೆ ಮನೆಯಲ್ಲಿ		ಪಕ್ಷಿಣೀ
ಗ್ರಾಮಾಂತರ		1 ದಿನ
	ಅಣ್ಣ-ತಮ್ಮಂದಿರ ಹೆಂಡತಿಗೆ	ಅಶೌಚವಿಲ್ಲ
ಅಕ್ಕ-ತಂಗಿಯರ ಮನೆಯಲ್ಲಿ	ಅಕ್ಕ-ತಂಗಿಯರಿಗೆ	3 ದಿನ
ಬೇರೆ ಮನೆಯಲ್ಲಿ		ಪಕ್ಷಿಣೀ
ಗ್ರಾಮಾಂತರ		1 ದಿನ

8) ಸೋದರಮಾವ

ಎಲ್ಲಿ	ಯಾರಿಗೆ	ಎಷ್ಟು ಅಶೌಚ
	ಸೋದರಳಿಯ-ಸೋದರಸೊಸೆಗೆ	ಪಕ್ಷಿಣೀ
ತಮ್ಮ ಮನೆಯಲ್ಲಿ ಮರಣವಾದರೆ		3 ದಿನ
ಬೇರೆ ಮನೆಯಾಗಿದ್ದರೂ ಉಪಕೃತರಾಗಿದ್ದರೆ		3 ದಿನ
ಗ್ರಾಮಾಂತರ ಆಥವಾ ಅನುಪನೀತನಾಗಿದ್ದರೆ	ಸೋದರಳಿಯ-ಸೋದರಸೊಸೆಗೆ	1 ದಿನ

ಇದೆ ರೀತಿ ಮಲಸೋದರಮಾವನಿಗೂ ತಿಳಿಯಬೇಕು.

9) ಸೊದರಮಾವನ ಹೆಂಡತಿ (ಮಾಮಿ)

ಯಾರು	ಯಾರಿಗೆ	ಎಷ್ಟು ಅಶೌಚ
ಸೊದರಮಾವನ ಹೆಂಡತಿ	ಸೋದರಳಿಯ-ಸೋದರಸೊಸೆಗೆ	ಪಕ್ಷಿಣೀ
ಮಲ ಸೋದರಮಾವನ ಹೆಂಡತಿ		ಸ್ನಾನ

10) ತಾಯಿಯ ತಂದೆ-ತಾಯಿಯ ತಾಯಿ

ಎಲ್ಲಿ	ಯಾರಿಗೆ	ಎಷ್ಟು ಅಶೌಚ
ತಾಯಿಯ ತಂದೆ	ಮೊಮ್ಮಗ-ಮೊಮ್ಮಗಳಿಗೆ	3 ದಿನ
ಗ್ರಾಮಾಂತರ		ಪಕ್ಷಿಣೀ
ತಾಯಿಯ ತಾಯಿ		ಪಕ್ಷಿಣೀ
ಗ್ರಾಮಾಂತರ		1ದಿನ

11)ತಾಯಿಯ ಅಕ್ಕ-ತಂಗಿಯರು (ಅಬಚಿ)

ಎಲ್ಲಿ	ಯಾರಿಗೆ	ಎಷ್ಟು ಅಶೌಚ
ತಮ್ಮ ಮನೆಯಲ್ಲಿ ಮೃತರಾದರೆ	ಮೃತರ ಅಕ್ಕತಂಗಿಯರ	3 ದಿನ
ಬೇರೆ ಮನೆಯಲ್ಲಿ ಮೃತರಾದರೆ	ಮಗ-ಮಗಳಿಗೆ	ಪಕ್ಷಿಣೀ

12) ತಂದೆಯ ಅಕ್ಕ-ತಂಗಿಯರು(ಸೋದರತ್ತೆ)

ಎಲ್ಲಿ	ಯಾರಿಗೆ	ಎಷ್ಟು ಅಶೌಚ
ತಮ್ಮ ಮನೆಯಲ್ಲಿ ಮೃತರಾದರೆ	ಮೃತರ	3 ದಿನ
ಬೇರೆ ಮನೆಯಲ್ಲಿ ಮೃತರಾದರೆ	ಅಣ್ಣ-ತಮ್ಮಂದಿರ	ಪಕ್ಷಿಣೀ
ಮಲಸೋದರತ್ತೆ	ಮಗ-ಮಗಳಿಗೆ	ಸ್ನಾನ

13) ಅಕ್ಕತಂಗಿಯರ ಮಕ್ಕಳು

ಯಾರು	ಯಾರಿಗೆ	ಎಷ್ಟು ಅಶೌಚ
ಉಪನೀತ	ಸೋದರಮಾವ-ಅಬಚಿಗೆ	3 ದಿನ
ಅನುಪನೀತ		ಪಕ್ಷಿಣೀ
ಹೆಣ್ಣುಮಗಳು		ಸ್ನಾನ

14) ಸೋದರಳಿಯ-ಸೋದರಸೊಸೆ (ಅಣ್ಣ-ತಮ್ಮಂದಿರ ಮಕ್ಕಳು)

ಯಾರು	ಯಾರಿಗೆ	ಎಷ್ಟು ಅಶೌಚ
ಸೋದರಳಿಯ-ಸೋದರಸೊಸೆ	ಸೋದರತ್ತೆಗೆ	ಸ್ನಾನ

15) ಮಗಳ ಮಗ (ಮಾತಾಮಹ-ಮಾತಾಮಹಿಗೆ)

ಯಾರು	ಯಾರಿಗೆ	ಎಷ್ಟು ಅಶೌಚ
ಉಪನೀತ	ಮಾತಾಮಹ-ಮಾತಾಮಹಿಗೆ (ಅಜ್ಜ-ಅಜ್ಜಿಗೆ)	3 ದಿನ
ಅನುಪನೀತ		ಪಕ್ಷಿಣೀ
ಮಗಳ ಮಗಳು		ಸ್ನಾನ

16) ಆತ್ಮಬಂಧುತ್ರಯ (ಸೋದರತ್ತೆ-ಸೋದರಮಾವ-ಅಬಚಿ ಇವರ ಮಗ)

ಎಲ್ಲಿ	ಯಾರಿಗೆ	ಎಷ್ಟು ಅಶೌಚ
ತನ್ನ ಮನೆಯಲ್ಲಿ ಮೃತನಾದರೆ	ತನಗೆ	3 ದಿನ
ಬೇರೆ ಮನೆಯಲ್ಲಿ		ಪಕ್ಷಿಣೀ
ಅನುಪನೀತ		1 ದಿನ

17)ಮಾತೃ-ಪಿತೃಬಂಧುತ್ರಯ (ತನ್ನ ತಾಯಿಯ ಮತ್ತು ತಂದೆಯ ಸೋದರತ್ತೆ-ಸೋದರಮಾವ-ಅಬಚಿ ಇವರ ಮಗ)

ಯಾರು	ಯಾರಿಗೆ	ಎಷ್ಟು ಅಶೌಚ
ತನ್ನ ಮನೆಯಲ್ಲಿ ಮೃತನಾದರೆ	ತನಗೆ	3 ದಿನ
ಬೇರೆ ಮನೆಯಲ್ಲಿ		ಪಕ್ಷಿಣೀ
ಅನುಪನೀತ		1 ದಿನ
ಕ್ರಮ ಸಂ. 16-17 ರಲ್ಲಿ ಹೇಳಿದವರಲ್ಲಿ ಮಗನ ಬದಲಾಗಿ ಮಗಳು ಮೃತಳಾದರೆ		
ವಿವಾಹಿತಳಾದರೆ	ತನಗೆ	1 ದಿನ
ಅವಿವಾಹಿತಳಾದರೆ		ಸ್ನಾನ

18) ಆತ್ಮಬಂಧುತ್ರಯ-ಪಿತೃಬಂಧುತ್ರಯ-ಮಾತೃಬಂಧುತ್ರಯ, ಇವರು ಮೃತರಾದರೆ ಹೆಣ್ಣು ಮಕ್ಕಳಿಗೆ ಸ್ನಾನ.

ವಿಶೇಷ: ಮೈತ್ರ ಎಂಬುವವನ ಆತ್ಮಬಂಧುತ್ರಯ-ಪಿತೃಬಂಧುತ್ರಯ- ಮಾತೃಬಂಧುತ್ರಯ ಇವರು ಮೃತರಾದರೆ ಮೈತ್ರನಿಗೆ ಮೇಲೆ ಹೇಳಿದ ಅಶೌಚ ಇದೆ.

ಅದೇ ರೀತಿ ಮೈತ್ರನು ಮೃತನಾದಾಗ ಮೈತ್ರನ ಆತ್ಮಬಂಧುತ್ರಯರಿಗೆ ಸಮಾನವಾದ (ಮೇಲೆ ಹೇಳಿದ) ಅಶೌಚವು ಅನ್ವಯವಾಗುತ್ತದೆ.

ಆದರೆಮೈತ್ರನುಮೃತನಾದಾಗಮೈತ್ರನಪಿತೃ-ಬಂಧುತ್ರಯ-ಮಾತೃಬಂಧುತ್ರಯರಿಗೆ ಅಶೌಚವಿಲ್ಲ.

19)ಗಂಡ-ಹೆಂಡತಿ

ಯಾರು	ಯಾರಿಗೆ	ಎಷ್ಟು ಅಶೌಚ
ಗಂಡ-ಹೆಂಡತಿ	ಪರಸ್ಪರ	10 ದಿನ
ಮರಣವಾರ್ತೆ 10 ದಿನದ ಮೇಲೆ ತಿಳಿದರೂ		
ಸವತಿ	ಗಂಡನಿಗೆ	10 ದಿನ

ಅಶೌಚ ನಿರ್ಣಯ...

20) ಹೆಂಡತಿಯ ತಂದೆ - ತಾಯಿ (ಅತ್ತೆ-ಮಾವ)

ಯಾರು	ಯಾರಿಗೆ	ಎಷ್ಟು ಅಶೌಚ
ಸನ್ನಿಧಿಯಲ್ಲಿ	ಅಳಿಯನಿಗೆ	3 ದಿನ
ಅಸನ್ನಿಧಿಯಲ್ಲಿ / ಹೆಂಡತಿ ಮೃತಳಾಗಿದ್ದರೆ		1 ದಿನ
ಅಸನ್ನಿಧಿಯಿದ್ದರೂ ಉಪಕೃತನಾಗಿದ್ದರೆ		3 ದಿನ

21) ಹೆಂಡತಿಯ ಅಣ್ಣ-ತಮ್ಮ ಉಪನೀತ

ಯಾರು	ಯಾರಿಗೆ	ಎಷ್ಟು ಅಶೌಚ
	ಭಾವನಿಗೆ	1 ದಿನ
ಅನುಪನೀತ-ಗ್ರಾಮಾಂತರ-ಹೆಂಡತಿಯ ಮರಣವಾಗಿದ್ದರೆ		ಸ್ನಾನ

22) ಹೆಂಡತಿಯ ಅಕ್ಕ-ತಂಗಿ

ಯಾರು	ಯಾರಿಗೆ	ಎಷ್ಟು ಅಶೌಚ
	ಭಾವನಿಗೆ	1 ದಿನ
ಗ್ರಾಮಾಂತರ-ಹೆಂಡತಿಯ ಮರಣವಾಗಿದ್ದರೆ		ಸ್ನಾನ

23) ಹೆಂಡತಿಯ ಅಣ್ಣ-ತಮ್ಮನ ಮಕ್ಕಳು ಇವರು ಮೃತರಾದರೆ ಸ್ನಾನ.

24) ಪರಗೋತ್ರದತ್ತಕ ವಿಚಾರ

ಯಾರು	ಯಾರಿಗೆ	ಎಷ್ಟು ಅಶೌಚ
ಬೇರೆ ಗೋತ್ರದ ದತ್ತು ತಂದೆತಾಯಿಗಳು	ದತ್ತು ಮಗನಿಗೆ	3 ದಿನ
ಜನ್ಮ ನೀಡಿದ ತಂದೆ ತಾಯಿಗಳು	ದತ್ತು ಹೋದ ಮಗನಿಗೆ	3 ದಿನ
ಬೇರೆ ಗೋತ್ರದ ದತ್ತಕ ಮಗ	ದತ್ತು ತಂದೆ-ತಾಯಿಗೆ	3 ದಿನ
	ಜನ್ಮನೀಡಿದ ತಂದೆ - ತಾಯಿಗೆ	3 ದಿನ
	ಪೂರ್ವಾಪರ ಸಪಿಂಡರಿಗೆ	1 ದಿನ
ದತ್ತುಕೊಟ್ಟ ಮತ್ತು ದತ್ತು ಸ್ವೀಕರಿಸಿದವರ ಸಪಿಂಡರು	ದತ್ತಕನಿಗೆ, ಅವನ ಪುತ್ರಪೌತ್ರಾದಿಗಳಿಗೆ	1 ದಿನ
ದತ್ತಕನ ಪುತ್ರಪೌತ್ರಾದಿಗಳು	ದತ್ತುಕೊಟ್ಟ ಮತ್ತು ದತ್ತು ಸ್ವೀಕರಿಸಿದವರ ಸಪಿಂಡರಿಗೆ	1 ದಿನ
ಸಪಿಂಡ, ಸೋದಕ, ಸಗೋತ್ರ ದತ್ತಕನಿದ್ದರೆ		ಯಥಾಯೋಗ್ಯವಾಗಿ 10,3,1 ದಿನ

25) ಮಂತ್ರೋಪದೇಶಕ ಗುರುಗಳು

	ಯಾರಿಗೆ	ಎಷ್ಟು ಅಶೌಚ
ಒಂದೇ ಗ್ರಾಮದಲ್ಲಿ ಗುರುಗಳು	ಶಿಷ್ಯನಿಗೆ	3 ದಿನ
ಗ್ರಾಮಾಂತರದಲ್ಲಿ ಗುರುಗಳು		ಪಕ್ಷಿಣೀ
ಗುರುಗಳ ಪತ್ನೀ-ಪುತ್ರ		1 ದಿನ
ಸಹಾಧ್ಯಾಯೀ		ಪಕ್ಷಿಣೀ

	ಯಾರು	ಯಾರಿಗೆ	ಎಷ್ಟು ಅಶೌಚ
26)	ಯತಿ	ಎಲ್ಲ ಸಪಿಂಡರಿಗೆ	ಸ್ನಾನ
27)	ಸಮಾನೋದಕರು	ಸಮಾನೋದಕರಿಗೆ	3 ದಿನ
28)	ಸಗೋತ್ರರು	ಸಗೋತ್ರರಿಗೆ	1 ದಿನ ಅಥವಾ ಸ್ನಾನ

29) ಗಂಡ-ಹೆಂಡತಿ

ಯಾರು	ಯಾರಿಗೆ	ಎಷ್ಟು ಅಶೌಚ
ಸಪಿಂಡರು	ಎಲ್ಲ ಸಪಿಂಡರಿಗೆ	10 ದಿನ
ಏಕದೇಶದಲ್ಲಿ ಸಪಿಂಡರ ಮರಣವಾದರೆ	ಪರಸ್ಪರ	10 ದಿನ
ಸವತಿ	ಗಂಡನಿಗೆ	10 ದಿನ

ಅಶೌಚ ವಿವರಣೆ

ಏಕಾದಶೀ ದಿನ ಮರಣವಾದರೆ: ದಾಹಾದಿಗಳನ್ನು ಸಮಂತ್ರಕವಾಗಿ ಮಾಡಬೇಕು. ಆದರೆ ಅಗ್ನಿಯಲ್ಲಿ ಆಹುತಿಗಳಿಲ್ಲ. ಪ್ರೇತ-ಪಿಂಡಪ್ರದಾನವಿಲ್ಲ. ತಿಲಾಂಜಲಿಯಿಲ್ಲ. ಇವನ್ನೆಲ್ಲ ಮಾರನೆ ದಿನ ಮಾಡಬೇಕು.

ಅಶೌಚ ಸಂಪಾತ

★ 10 ದಿವಸದ ಮರಣಾಶೌಚ ಇದ್ದಾಗ ಇನ್ನೊಂದು (ತಂದೆ, ತಾಯಿ, ಗಂಡ, ಹೆಂಡತಿ ಹೊರತಾದ) 10 ದಿವಸದ, 3 ದಿವಸದ ಅಥವಾ ಅದಕ್ಕೂ ಕಡಿಮೆ ಇದ್ದ ಹೊಸ ಜನನ-ಮರಣ ಅಶೌಚ ಬಂದರೆ ಮೊದಲಿನ ಅಶೌಚಸಮಾಪ್ತಿ ದಿನವೆ ಹೊಸ ಅಶೌಚ ನಿವೃತ್ತಿ ಆಗುವದು.

★ ಇದೇ ರೀತಿ 3 ದಿವಸ ಮೊದಲಾದ ಯಾವುದೇ ಮರಣಾಶೌಚ ಇದ್ದಾಗ ಅದರ ಮಧ್ಯದಲ್ಲಿ ಅದಕ್ಕೆ ಸಮಾನವಾದ ಅಥವಾ ಅದಕ್ಕೂ ಕಡಿಮೆ ಇದ್ದ ಹೊಸ ಜನನ-ಮರಣ ಅಶೌಚ ಬಂದರೆ ಮೊದಲಿನ ಅಶೌಚಸಮಾಪ್ತಿ ದಿನವೆ ಹೊಸ ಅಶೌಚ ನಿವೃತ್ತಿ ಆಗುವದು.

★ ಅದರೆ 3 ದಿನ, ಪಕ್ಷಿಣೀ ಮೊದಲಾದ ಕಡಿಮೆ ಮರಣಾಶೌಚದ ಮಧ್ಯದಲ್ಲಿ ಅದಕ್ಕೂ ಹೆಚ್ಚಿನ ಜನನ-ಮರಣ ಅಶೌಚ ಬಂದರೆ ಮೊದಲಿನ ಅಶೌಚಸಮಾಪ್ತಿ ದಿನದಲ್ಲಿ ಹೊಸ ಅಶೌಚ ನಿವೃತ್ತಿ ಆಗುವುದಿಲ್ಲ. ಪ್ರತ್ಯೇಕವಾಗಿ ಹೊಸ ಜನನ-ಮರಣ ಅಶೌಚವನ್ನು ಆಚರಿಸಬೇಕು.

★ ಇದರಂತೆ ಜನನಾಶೌಚವನ್ನೂ ತಿಳಿಯಬೇಕು.

★ 10 ದಿನದ ಅಥವಾ 3 ದಿನದ (ಜನನಾಶೌಚ) ವೃದ್ಧಿಯಲ್ಲಿ ಅದಕ್ಕೆ ಸಮಾನವಾದ ಅಥವಾ ಅದಕ್ಕೂ ಕಡಿಮೆಯ ಮತ್ತೊಂದು ಹೊಸ ಜನನಾಶೌಚ ಬಂದರೆ ಮೊದಲಿನ ವೃದ್ಧಿಸಮಾಪ್ತಿಯ ದಿನವೇ ಹೊಸ ವೃದ್ಧಿಯು ನಿವೃತ್ತವಾಗುವುದು. ತಾಯಿಗೆ ಮಾತ್ರ ಪೂರ್ಣ ಅಶೌಚವಿರುತ್ತದೆ.

★ ಆದರೆ ಜನನಾಶೌಚದ ಮಧ್ಯದಲ್ಲಿ ಕಡಿಮೆ, ಸಮಾನ ಯಾವುದೇ ಮರಣಾಶೌಚ ಬಂದರೂ ಮರಣಾಶೌಚವು ನಿವೃತ್ತಿಯಾಗುವುದಿಲ್ಲ. ಮರಣಾಶೌಚವನ್ನು ಪ್ರತ್ಯೇಕ ಆಚರಿಸಬೇಕು.

ವಿಶೇಷ: ಯಾವುದೇ ಅಶೌಚವು ಅಶೌಚಯೋಗ್ಯಕಾಲದ ಪ್ರಾರಂಭದಲ್ಲಿ ತಿಳಿಯದೇ ಮಧ್ಯದಲ್ಲಿ ತಿಳಿದರೆ ಅವಶಿಷ್ಟದಿನಗಳಲ್ಲಷ್ಟೇ ಅಶೌಚಾಚರಣೆ ಮಾಡಬೇಕು. ಉದಾ.: 10 ದಿನದ ಆಶೌಚವು ಮೊದಲ ದಿನ ತಿಳಿಯದೇ 8ನೇ ದಿನ ತಿಳಿದರೆ ಉಳಿದ 2 ದಿನಗಳಲ್ಲಷ್ಟೇ ಅಶೌಚವನ್ನು ಆಚರಿಸಬೇಕು.

ಅತಿಕ್ರಾಂತಾಶೌಚ: ಅಶೌಚಯೋಗ್ಯಕಾಲದಲ್ಲಿ (10 ದಿನದಲ್ಲಿ) ಮರಣವಾರ್ತೆ ತಿಳಿಯದೆ ನಂತರ ತಿಳಿದಾಗ ಮಾಡುವ ಅಶೌಚ.

★ ಈ ಅಶೌಚವು 10 ದಿನದ ಮರಣಾಶೌಚಕ್ಕೆ ಮತ್ತು ತಂದೆ-ತಾಯಿ ಮೃತರಾದಾಗ ವಿವಾಹಿತ ಮಗಳಿಗೆ ಹೇಳಿದ 3 ದಿನದ ಅಶೌಚಕ್ಕೆ ಮಾತ್ರ ಅನ್ವಯಿಸುತ್ತದೆ.

★ ಜನನಾಶೌಚಕ್ಕೆ, ಅನುಪನೀತ ಮರಣಾಶೌಚಕ್ಕೆ ಮತ್ತು 10 ದಿನಕ್ಕಿಂತಲೂ ಕಡಿಮೆ ಇರುವ ಮರಣಾಶೌಚಕ್ಕೆ ಅತಿಕ್ರಾಂತಾಶೌಚ ಅನ್ವಯಿಸುವುದಿಲ್ಲ.

ದೇಶಾಂತರ-ಗ್ರಾಮಾಂತರ: ಅಂದರೆ 20 ಅಥವಾ 30 ಯೋಜನಕ್ಕಿಂತ (260 ಕಿ.ಮಿ) ಹೆಚ್ಚಿಗೆ ದೂರದಲ್ಲಿ ಇದ್ದರೆ ಅಥವಾ ಭಾಷೆ ಬೇರೆ ಇದ್ದು ನದೀ ಪರ್ವತಗಳು ಮಧ್ಯದಲ್ಲಿ ಇದ್ದರೆ ದೇಶಾಂತರವೆನಿಸುವದು.

ಪಕ್ಷಿಣೀ: ಹಗಲು ಮರಣವಾದರೆ ಆ ಹಗಲು ಅಂದಿನ ರಾತ್ರಿ ಮುಂದಿನ ಹಗಲು. ಮರುದಿವಸಸಾಯಂಕಾಲನಕ್ಷತ್ರ ದರ್ಶನದನಂತರಸ್ನಾನಾದಿಗಳನ್ನು ಮಾಡಬೇಕು. (ಸಾಯಂಕಾಲ ಶುದ್ಧಿಸ್ನಾನ ಮಾಡುವವರು ಅಂದಿನ ಹಗಲಿನಲ್ಲಿ ಉಪವಾಸ ಇರಬೇಕು.) ರಾತ್ರಿ ಮರಣವಾದರೆ ಆ ರಾತ್ರಿ, ಅದರ ಮುಂದಿನ ಹಗಲು-ರಾತ್ರಿಗಳು. ಮರುದಿವಸ ಸೂರ್ಯೋದಯಾನಂತರ ಶುದ್ಧಿಸ್ನಾನಾದಿಗಳನ್ನು ಮಾಡಬೇಕು.

ಸಜ್ಯೋತಿ: ಹಗಲು ಮರಣವಾದರೆ ರಾತ್ರಿ ಸ್ನಾನದಿಂದ ಶುದ್ಧಿಯು, ರಾತ್ರಿಮರಣವಾದರೆ ಹಗಲು ಸ್ನಾನದಿಂದ ಶುದ್ಧಿಯು.

ಅಶೌಚದಲ್ಲಿಶುದ್ಧವಸ್ತುಗಳು: ಪಲ್ಯೇಕಾಯಿ, ಹಾಲು, ತುಪ್ಪ, ಧಾನ್ಯ ಇತ್ಯಾದಿ.

ತ್ರಿಪಾದ ನಕ್ಷತ್ರಗಳು: ಕೃತ್ತಿಕಾ, ಪುನರ್ವಸು, ಉತ್ತರಾ, ವಿಶಾಖಾ, ಉತ್ತರಾಷಾಢಾ, ಪೂರ್ವಾಭಾದ್ರಪದಾ.

ಪಂಚಕನಕ್ಷತ್ರಗಳು: ಧನಿಷ್ಠಾ, ಶತತಾರಕಾ, ಪೂರ್ವಾಭಾದ್ರಪದ, ಉತ್ತರಾಭಾದ್ರಪದ, ರೇವತೀ.

ಧನಿಷ್ಠಾ ಉತ್ತರಾರ್ಧದಿಂದ ರೇವತೀವರೆಗೆ ಈ ಪಂಚಕನಕ್ಷತ್ರಗಳಲ್ಲಿ ಮರಣವಾದರೆ ಮೃತಸ್ಥಳವನ್ನು 5 ತಿಂಗಳಕಾಲದವರೆಗೆ, ತ್ರಿಪಾದ ನಕ್ಷತ್ರಗಳಲ್ಲಿ ಮರಣವಾದರೆ ಮೃತಸ್ಥಳವನ್ನು 3 ತಿಂಗಳಕಾಲದ ವರೆಗೆ ಬಿಡಬೇಕು. ಅಥವಾ ದೋಷಪರಿಹಾರಕ್ಕಾಗಿ ಶಾಂತಿಯನ್ನು ಮಾಡಬೇಕು.

ಅಶೌಚ ಕರ್ತವ್ಯ

ಜನನಾಶೌಚ-ಮರಣಾಶೌಚಗಳಲ್ಲಿ (ದೇವಪೂಜಾ-ವೈಶ್ವದೇವ-ಮುಂತಾದ) ಪಂಚಮಹಾಯಜ್ಞಗಳನ್ನು ಮಾಡಬಾರದು. ಅರ್ಘ್ಯದವರೆಗೆ ಸಂಧ್ಯಾವಂದನವನ್ನು ಮನಸ್ಸಿನಲ್ಲಿ ಮಂತ್ರವನ್ನು ಉಚ್ಚರಿಸಿ ಮಾಡಬೇಕು. ಪ್ರಾಣಾಯಾಮದ ಮಂತ್ರವನ್ನು ಮನಸ್ಸಿನಲ್ಲೂ ಉಚ್ಚರಿಸಬಾರದು. ಮಂತ್ರವಿಲ್ಲದೆ ಪ್ರಾಣಾಯಾಮವನ್ನು ಮಾಡಬೇಕು. ಗಾಯತ್ರೀಜಪವಿಲ್ಲ. ಸೂರ್ಯೋಪಸ್ಥಾನವಿಲ್ಲ. ಅರ್ಘ್ಯದ ವರೆಗೆ ಸಂಧ್ಯಾವಂದನ.

ಆಶೌಚದಲ್ಲಿ ಚಿತ್ರಾಹುತಿಯನ್ನು ಇಡಬಾರದು. ಮರಣಾಶೌಚದಲ್ಲಿ ಕೇವಲ ಅಂಗಾರವನ್ನು ಧರಿಸಬೇಕು.

ಮೃತಾಶೌಚವಿದ್ದವರನ್ನು ಮುಟ್ಟಿದರೆ ಸ್ನಾನಮಾಡಬೇಕು. ಜಾತಾಶೌಚವಿದ್ದವರನ್ನು ಮುಟ್ಟಿದರೆ ಸ್ನಾನ ಕಾರಣವಿಲ್ಲ. ಜನನಮರಣ ಅಶೌಚಾನಂತರ ಯಜ್ಞೋಪವೀತವನ್ನು ಬದಲಾಯಿಸಬೇಕು. ಶವವನ್ನು ಸ್ಪರ್ಶ ಮಾಡಿದರೆ ಅಥವಾ ಶವದ ಅನುಗಮನ ಮಾಡಿದರೆ ಅಥವಾ ಶವಸ್ಪರ್ಶ ಮಾಡಿದವರನ್ನು ಮುಟ್ಟಿದರೂ ಯಜ್ಞೋಪವೀತವನ್ನು ಬದಲಾಯಿಸಬೇಕು.

★ ಅಶೌಚಕಾಲದಲ್ಲಿ ಶ್ರಾದ್ಧ ಬಂದರೆ 11ನೇ ದಿನ ಶುದ್ಧಿಯಾದ ಮೇಲೆ ಶ್ರಾದ್ಧವನ್ನು ಮಾಡಬೇಕು. ಅಶೌಚದಲ್ಲಿ ಲೋಪವಾದ ಪಂಚಮಹಾಯಜ್ಞಗಳನ್ನು, ದರ್ಶತರ್ಪಣವನ್ನು ಅಶೌಚಾನಂತರ ಮತ್ತೆ ಮಾಡಬೇಕಿಲ್ಲ.

ಮೇಲಿನ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನುರಿತ ವಿದ್ವಾಂಸರನ್ನು ಕೇಳಿ ಪಡೆಯಬೇಕು.

ಪಿತೃತರ್ಪಣಮ್

★ ಅಪಸವ್ಯದಿಂದ ಅಂಗುಷ್ಠಮೂಲದಿಂದ ದಕ್ಷಿಣಾಭಿಮುಖವಾಗಿ ತರ್ಪಣ ಕೊಡಬೇಕು. ★ತರ್ಪಣವನ್ನು ತಂದೆ ಮೃತರಾದವರು ಮಾತ್ರ ಕೊಡಬೇಕು. ★ಮೃತರಾದವರಿಗೆ ಮಾತ್ರ ಕೊಡಬೇಕು. ★ತಾಯಿ ಬದುಕಿದ್ದರೆ ಕ್ರ.ಸಂ.6-7 ಮೃತರಾಗಿದ್ದರೂ ಅವರಿಗೆ ತರ್ಪಣ ಕೊಡಬಾರದು. ★ಇದೇ ರೀತಿ ಕ್ರ.ಸಂ.8 ಬದುಕಿದ್ದರೆ ಕ್ರ.ಸಂ. 9-10 ಮೃತರಾಗಿದ್ದರೂ ತರ್ಪಣವಿಲ್ಲ. ಮತ್ತು ಕ್ರ.ಸಂ.11 ಬದುಕಿದ್ದರೆ ಕ್ರ.ಸಂ.12-13 ಮೃತರಾಗಿದ್ದರೂ ತರ್ಪಣವಿಲ್ಲ. ★ದರ್ಶದ ದಿನ 1 ರಿಂದ 13ರವರೆಗೆ ಮಾತ್ರ ತಿಲಸಹಿತ ನೀರಿನಿಂದ ತರ್ಪಣ ಕೊಡಬೇಕು. ★ಪ್ರತಿನಿತ್ಯ ಬ್ರಹ್ಮಯಜ್ಞಾಂಗವಾಗಿ ಎಲ್ಲ ತರ್ಪಣವನ್ನು ನೀರಿನಿಂದ ಕೊಡಬೇಕು. ★ಪಕ್ಷಮಾಸದಲ್ಲಿ 15 ದಿನ ಈ ಎಲ್ಲ ತರ್ಪಣಗಳನ್ನು ತಿಲಸಹಿತ ನೀರಿನಿಂದ ಕೊಡಬೇಕು. ★ತಿಲ ತರ್ಪಣ ಕೊಟ್ಟದಿನ ರಾತ್ರಿ ಭೋಜನವನ್ನು ಮಾಡಬಾರದು.

1	ಅಸ್ಮತ್ ಪಿತರಂ...	ತಂದೆ	(ನಾರಾಯಣ)ಶರ್ಮಾಣಂ... (ಕಾಶ್ಯಪ)ಗೋತ್ರಂ ವಸ್ವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಪದ್ಮುಮ್ನಂ ಸ್ವಧಾ ನಮಃ ತರ್ಪಯಾಮಿ ತರ್ಪಯಾಮಿ ತರ್ಪಯಾಮಿ ।
2	ಅಸ್ಮತ್ ಪಿತಾಮಹಂ...	ತಂದೆಯ ತಂದೆ	...ಶರ್ಮಾಣಂ ...ಗೋತ್ರಂ ...ರುದ್ರಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಸಂಕರ್ಷಣಂ ಸ್ವಧಾ ನಮಃ ತರ್ಪಯಾಮಿ ತರ್ಪಯಾಮಿ ತರ್ಪಯಾಮಿ ।
3	ಅಸ್ಮತ್ ಪ್ರಪಿತಾಮಹಂ...	ತಂದೆಯ ಅಜ್ಜ	...ಶರ್ಮಾಣಂ ...ಗೋತ್ರಂ ಆದಿತ್ಯಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ವಾಸುದೇವಂ ಸ್ವಧಾ ನಮಃ ತರ್ಪಯಾಮಿ ತರ್ಪಯಾಮಿ ತರ್ಪಯಾಮಿ ।
4	ಅಸ್ಮನ್ಮಾತರಂ...	ತಾಯಿ	(ಭಾಗೀರಥೀದಾಂ)...ದಾಂ ...ಗೋತ್ರಾಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
5	ಅಸ್ಮತ್ಪಿತಾಮಹೀಂ...	ತಂದೆಯ ತಾಯಿ	...ದಾಂ ...ಗೋತ್ರಾಂ ರುದ್ರಾಂ...ಸಂಕರ್ಷಣಂ ...ತರ್ಪಯಾಮಿ ತರ್ಪಯಾಮಿ ।
6	ಅಸ್ಮತ್ ಪ್ರಪಿತಾಮಹೀಂ...	ತಂದೆಯ ತಾಯಿ ತಾಯಿ	...ದಾಂ ...ಗೋತ್ರಾಂ ಆದಿತ್ಯಾಂ...ವಾಸುದೇವಂ ...ತರ್ಪಯಾಮಿ ತರ್ಪಯಾಮಿ ।
7	ಅಸ್ಮತ್ಸಾಪತ್ನಮಾತರಂ...	ಮಲತಾಯಿ	...ದಾಂ ...ಗೋತ್ರಾಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ತರ್ಪಯಾಮಿ ।
8	ಅಸ್ಮನ್ಮಾತಾಮಹಂ...	ತಾಯಿಯ ತಂದೆ	...ಶರ್ಮಾಣಂ ...ಗೋತ್ರಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
9	ಅಸ್ಮನ್ಮಾತುಃ ಪಿತಾಮಹಂ...	ತಾಯಿಯ ತಾತ	...ಶರ್ಮಾಣಂ ...ಗೋತ್ರಂ ರುದ್ರಾಂ...ಸಂಕರ್ಷಣಂ ...ತರ್ಪಯಾಮಿ ತರ್ಪಯಾಮಿ ।
10	ಅಸ್ಮನ್ಮಾತುಃ ಪ್ರಪಿತಾಮಹಂ...	ತಾಯಿಯ ಮುತ್ತಾತ	...ಶರ್ಮಾಣಂ ...ಗೋತ್ರಂ ಆದಿತ್ಯಾಂ...ವಾಸುದೇವಂ ...ತರ್ಪಯಾಮಿ ತರ್ಪಯಾಮಿ ।
11	ಅಸ್ಮನ್ಮಾತಾಮಹೀಂ...	ತಾಯಿಯ ತಾಯಿ	...ದಾಂ ...ಗೋತ್ರಾಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
12	ಅಸ್ಮನ್ಮಾತುಃ ಪಿತಾಮಹೀಂ...	ತಾಯಿಯ ಅಜ್ಜಿ	...ದಾಂ ...ಗೋತ್ರಾಂ ರುದ್ರಾಂ...ಸಂಕರ್ಷಣಂ ...ತರ್ಪಯಾಮಿ ತರ್ಪಯಾಮಿ ।
13	ಅಸ್ಮನ್ಮಾತುಃ ಪ್ರಪಿತಾಮಹೀಂ..	ತಾಯಿಯ ಮುತ್ತಜ್ಜಿ	...ದಾಂ ...ಗೋತ್ರಾಂ ಆದಿತ್ಯಾಂ...ವಾಸುದೇವಂ ...ತರ್ಪಯಾಮಿ ತರ್ಪಯಾಮಿ ।
14	ಅಸ್ಮತ್ಪತ್ನೀಂ ...	ಹೆಂಡತಿ	...ದಾಂ ...ಗೋತ್ರಾಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
15	ಅಸ್ಮತ್ಸುತಂ...	ಮಗ	...ಶರ್ಮಾಣಂ ...ಗೋತ್ರಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
16	ಅಸ್ಮದ್ಭ್ರಾತರಂ...	ಅಣ್ಣ-ತಮ್ಮ	...ಶರ್ಮಾಣಂ ...ಗೋತ್ರಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
17	ಅಸ್ಮತ್ಪಿತೃವ್ಯಂ...	ತಂದೆಯ ಅಣ್ಣ-ತಮ್ಮ	...ಶರ್ಮಾಣಂ ...ಗೋತ್ರಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
18	ಅಸ್ಮನ್ಮಾತುಲಂ...	ಸೋದರಮಾವ	...ಶರ್ಮಾಣಂ ...ಗೋತ್ರಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
19	ಅಸ್ಮದ್ದುಹಿತರಂ (ಸಭರ್ತೃಕಾಂ ಸಸುತಾಂ)...	ಮಗಳು	...ದಾಂ ...ಗೋತ್ರಾಂ ವಸ್ವಂ... ಪ್ರದ್ಯುಮ್ನಂ ....ತರ್ಪಯಾಮಿ ।
20	ಅಸ್ಮದ್ಭಗಿನೀಂ...	ಅಕ್ಕ-ತಂಗಿ	...ದಾಂ ...ಗೋತ್ರಾಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
21	ಅಸ್ಮತ್ಪಿತೃಷ್ವಸಾರಂ ...	ಸೋದರತ್ತೆ	...ದಾಂ ...ಗೋತ್ರಾಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
22	ಅಸ್ಮನ್ಮಾತೃಷ್ವಸಾರಂ ...	ತಾಯಿಯ ಅಕ್ಕ-ತಂಗಿ	...ದಾಂ ...ಗೋತ್ರಾಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
23	ಅಸ್ಮತ್ ಶ್ವಶುರಂ ...	ಹೆಣ್ಣು ಕೊಟ್ಟ ಮಾವ	...ಶರ್ಮಾಣಂ ...ಗೋತ್ರಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
24	ಅಸ್ಮದ್ಗುರುಂ ...	ಗಾಯತ್ರೀ ಉಪದೇಶಕರು	...ಶರ್ಮಾಣಂ ...ಗೋತ್ರಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।
25	ಅಸ್ಮದಾಚಾರ್ಯಂ ...	ವಿದ್ಯಾ ಗುರುಗಳು	...ಶರ್ಮಾಣಂ ...ಗೋತ್ರಂ ವಸ್ವಂ... ಪ್ರದ್ಮುಮ್ನಂ ....ತರ್ಪಯಾಮಿ ।

ಯೇ ಕೇ ಚಾಸ್ಮತ್ಕುಲೇ ಜಾತಾ ಅಪುತ್ರಾ ಗೋತ್ರಿಣೋ ಮೃತಾಃ । ತೇ ಗೃಹ್ಣಂತು ಮಯಾ ದತ್ತಂ ಸೂತ್ರನಿಷ್ಪೀಡನೋದಕಮ್ ॥ ಯಸ್ಯ ಸ್ಮೃತ್ಯಾ... ।

ಅನೇನ ಬ್ರಹ್ಮಯಜ್ಞಾಂಗ (ದರ್ಶ, ಮಹಾಲಯ)ತರ್ಪಣೇನ ಶ್ರೀಮಜ್ಜನಾರ್ದನ ವಾಸುದೇವಃ ಪ್ರೀಯತಾಂ ಪ್ರೀತೋ ಭವತು ಶ್ರೀಕೃಷ್ಣಾರ್ಪಣಮಸ್ತು ॥

ಘಾತಚಕ್ರ

	ಜನ್ಮರಾಶಿ											
	ಮೇಷ	ವೃಷಭ	ಮಿಥುನ	ಕರ್ಕ	ಸಿಂಹ	ಕನ್ಯಾ	ತುಲಾ	ವೃಶ್ಚಿಕ	ಧನು	ಮಕರ	ಕುಂಭ	ಮೀನ
ಘಾತಮಾಸ	ಕಾರ್ತಿಕ	ಮಾರ್ಗಶೀರ್ಷ	ಆಷಾಢ	ಪೌಷ	ಜ್ಯೇಷ್ಠ	ಭಾದ್ರಪದ	ಮಾರ್ಗಶೀರ್ಷ	ಆಶ್ವಿನ	ಶ್ರಾವಣ	ವೈಶಾಖ	ಚೈತ್ರ	ಫಾಲ್ಗುಣ
ಘಾತತಿಥಿ	1,6,11	5,10,15	2,7,12	2,7,12	3,8,13	5,10,15	4,9,14	1,6,11	3,8,13	4,9,14	3,8,13	5,10,15
ಘಾತವಾರ	ರವಿ	ಶನಿ	ಸೋಮ	ಬುಧ	ಶನಿ	ಶನಿ	ಗುರು	ಶುಕ್ರ	ಶುಕ್ರ	ಮಂಗಳ	ಗುರು	ಶುಕ್ರ
ಘಾತನಕ್ಷತ್ರ	ಮಘಾ	ಹಸ್ತ	ಸ್ವಾತೀ	ಅನುರಾಧಾ	ಮೂಲ	ಶ್ರವಣ	ಶತತಾರಕಾ	ರೇವತೀ	ಭರಣೀ	ರೋಹಿಣೀ	ಆರ್ದ್ರಾ	ಆಶ್ಲೇಷಾ
ಘಾತಯೋಗ	ವಿಷ್ಕಂಭ	ಶುಕ್ಲ	ಪರಿಘ	ವ್ಯಾಘಾತ	ಧೃತಿ	ಶುಕ್ಲ	ಶುಕ್ಲ	ವ್ಯತೀಪಾತ	ವಜ್ರ	ವೈಧೃತಿ	ಗಂಡ	ವಜ್ರ
ಘಾತಕರಣ	ಬವ	ಶಕುನಿ	ಕೌಲವ	ನಾಗ	ಬವ	ಕೌಲವ	ತೈತಿಲ	ಗರ	ತೈತಿಲ	ಶಕುನಿ	ಕಿಂಸ್ತುಘ್ನ	ಚತುಷ್ಪಾತ್
ಘಾತಪ್ರಹರ	1	4	3	1	1	1	4	1	1	4	3	4
ಪು.ಘಾ.ಚಂದ್ರ	1	5	9	2	6	10	3	7	4	8	11	12
ಸ್ತ್ರೀ.ಘಾ.ಚಂದ್ರ	1	8	7	9	4	3	6	2	10	11	5	12

ದ್ಯೂತ, ಪ್ರವಾಸ, ರಾಜದರ್ಶನ, ಯಾತ್ರಾ, ಪ್ರಯಾಣ, ವಾಣಿಜ್ಯ, ಹೊಸ ಉದ್ಯೋಗ ಇತ್ಯಾದಿಗಳಿಗೆ ವರ್ಜ್ಯ.

ನವಗ್ರಹಾಃ

ಶ್ರೀ	ಸೂರ್ಯಃ	ಚಂದ್ರಃ	ಮಂಗಳಃ	ಬುಧಃ	ಗುರುಃ	ಶುಕ್ರಃ	ಶನಿಃ	ರಾಹುಃ	ಕೇತುಃ
ಮಿತ್ರಗ್ರಹಃ	ಚಂ,ಮಂ,ಗು.	ರ,ಬು	ರ, ಗು, ಚಂ	ರ, ರಾ, ಶು.	ರ, ಚಂ, ಮಂ.	ಬು,ರಾ, ಶ.	ಬು,ರಾ, ಶು	ಬು, ಶ, ಶು	ಬು, ಶು, ಶ
ಸಮಗ್ರಹಃ	ಬು	ಮಂ,ಶು,ಗು,ಶ	ಶು, ಶ	ಮಂ, ಶ, ಗು	ಶ, ರಾ.	ಮಂ, ಗು,	ಗು	ಗು	ಗು
ಶತ್ರುಗ್ರಹಃ	ಶ,ರಾ,ಶು.	ರಾ	ಬು, ರಾ.	ಚಂ	ಬು, ಶು	ರ, ಚಂ	ರ, ಚಂ, ಮಂ	ರ, ಚಂ, ಮಂ.	ರ, ಚಂ, ಮಂ
ಸ್ಪಷ್ಟೋತ್ಪನ್ನೆ	ಸಿಂಹ	ಕರ್ಕ	ಮೇಷ, ವೃಶ್ಚಿಕ	ಮಿಥುನ, ಕನ್ಯಾ	ಧನು, ಮೀನ	ವೃಷಭ, ತುಲಾ	ಮಕರ ಕುಂಭ	ಕನ್ಯಾ	ಮೀನ
ಉಚ್ಚಕ್ಷೇತ್ಯಾನೆ	ಮೇಷ	ವೃಷಭ	ಮಕರ	ಕನ್ಯಾ	ಕರ್ಕ	ಮೀನ	ತುಲಾ	ಮಿಥುನ	ಧನು
ಅಂಶಃ	10	3	28	15	5	27	20	15	15
ನೀಚ ಕ್ಷೇತ್ಯಾನೆ	ತುಲಾ	ವೃಶ್ಚಿಕ	ಕರ್ಕ	ಮೀನ	ಮಕರ	ಕನ್ಯಾ	ಮೇಷ	ಧನು	ಮಿಥುನ
ಅಂಶಃ	10	3	28	15	5	27	20	15	15
ಮೂಲ ತ್ರಿಕೋಣಾನಿ	ಸಿಂಹ	ವೃಷಭ	ಮೇಷ	ಕನ್ಯಾ	ಧನು	ತುಲಾ	ಕುಂಭ	ಕರ್ಕ	ಮಕರ
ಸಂಪೂರ್ಣ ದೃಷ್ಟಿಃ	7	7	4/7/8	7	5/7/9	7	3/7/10	7	7
ಕಾರಕತ್ವ	ಪಿತೃ	ಮಾತೃ	ಭ್ರಾತೃ	ಪ್ರಜ್ಞಾ	ಪುತ್ರ	ಕಳತ್ರ	ಆಯುಷ್ಯ	ಮಾತಾಮಹ	ಪಿತಾಮಹ
ಲಿಂಗ	ಪು.	ಸ್ತ್ರೀ.	ಪು.	ನಪುಂ.	ಪು.	ಸ್ತ್ರೀ.	ನಪುಂ.	ಪು	ಪು
ಸ್ವಭಾವಃ	ಕ್ರೂರ	ಸೌಮ್ಯ	ಕ್ರೂರ	ಸೌಮ್ಯ	ಸೌಮ್ಯ	ಸೌಮ್ಯ	ಕ್ರೂರ	ಕ್ರೂರ	ಕ್ರೂರ
ದಿಶಾ	ಪೂರ್ವ	ವಾಯವ್ಯ	ದಕ್ಷಿಣ	ಉತ್ತರ	ಈಶಾನ್ಯ	ಆಗ್ನೇಯ	ಪಶ್ಚಿಮ	ನೈಋತ್ಯ	ನೈಋತ್ಯ
ಸ್ಥಾನಂ	10	4	10	1	1	4	7		
ಕಾಲಬಲಂ	ಮಧ್ಯಾಹ್ನ	ಅಪರಾಹ್ಣ	ಮಧ್ಯಾಹ್ನ	ಪ್ರಾತಃ	ಪ್ರಾತಃ	ಪರಾಹ್ಣ	ಸಾಯಂ	ಸಾಯಂ	ಸಾಯಂ
ಗೋಚಾರೇ ಶುಭಸ್ಥಾನಂ	3/6/11	1/3/6/7	3/6/11	2/4/6/8	2/5/7	1/2/3/4/5/8	3/6/11	3/6/11	3/6/11
ಜನ್ಮರಾಶಿಯಿಂದ		10/11		10/11	9/11	9/11/12			
ರಾಶಿಯಲ್ಲಿರುವ ಕಾಲ	1ಮಾಸ	21/4ದಿನ	11/4ಮಾಸ	1ಮಾಸ	12ಮಾಸ	1ಮಾಸ	30ಮಾಸ	18ಮಾಸ	18ಮಾಸ
ಗೋಚಾರೇ ವಿ.ಫಲಕಾಲಂ	ಆದಿ 5ದಿನ.	ಅಂತ್ಯೇ 3 ಘಳಿಗೆ	ಮೊದಲ 8 ದಿನ	ಸರ್ವದಾ ಫಲ	ಮಧ್ಯೇ 2 ಮಾಸ	ಮಧ್ಯೇ 7ದಿನ	ಅಂತ್ಯೇ 3ಮಾಸ	ಅಂತ್ಯೇ 3ಮಾಸ	ಅಂತ್ಯೇ 3ಮಾಸ
ಆಕಾರ	ವರ್ತುಲ	ಚತುರಸ್ರ	ತ್ರಿಕೋಣ	ಬಾಣ	ದೀರ್ಘಚತುರಸ್ರ	ಪಂಚಕೋಣ	ಧನುಸ್ಸು	ಶೂರ್ಪ	ಧ್ವಜ
ದೇಶ	ಕಳಿ	ಯಾಮುನ	ವಿಂಧ್ಯ	ಮಗಧ	ಸಿಂಧು	ಪಾಂಚಾಲ	ಸೌರಾಷ್ಟ್ರ	ಸಿಂಹಲ	ಬರ್ಬರ
ಗೋತ್ರಂ	ಕಾಶ್ಯಪ	ಆತ್ರೇಯ	ಭಾರದ್ವಾಜ	ಆತ್ರಿ	ಆಂಗೀರಸ	ಭಾರ್ಗವ	ಕಶ್ಯಪ	ಪೈಠೀನಸ	ಜೈಮಿನೀ
ಅಧಿದೇವತೇ	ಅಗ್ನಿ	ಆಪಃ	ಭೂಮಿ	ವಿಷ್ಣು	ಇಂದ್ರ	ಇಂದ್ರಾಣಿ	ಪ್ರಜಾಪತಿ	ಸರ್ಪ	ಬ್ರಹ್ಮ
ಪ್ರತ್ಯಧಿದೇವತೇ	ಈಶ್ವರ	ಪಾರ್ವತೀ	ಸ್ಕಂದ	ನಾರಾಯಣ	ಬ್ರಹ್ಮ	ಇಂದ್ರ	ಯಮ	ಕಾಲ	ಚಿತ್ರಗುಪ್ತ
ಧಾತು	ಸುವರ್ಣ	ಸುವರ್ಣ	ಸುವರ್ಣ	ಸುವರ್ಣ	ಸುವರ್ಣ	ಸುವರ್ಣ	ಸುವರ್ಣ	ಸುವರ್ಣ	ಸುವರ್ಣ
ಉಪಧಾತು	ತಾಮ್ರ	ರೌಪ್ಯ	ತಾಮ್ರ	ಕಾಂಸ್ಯ	ಕಾಂಸ್ಯ	ರೌಪ್ಯ	ಲೋಹ	ಪೀಸೆ	ಾಲಾದ
ರತ್ನಂ	ಮಣಿ	ಮುತ್ತು	ಪ್ರವಾಲ	ಪಚ್ಚೆ	ಪುಷ್ಪರಾಗ	ವಜ್ರ	ನೀಲಮಣಿ	ಗೋಮೇಧ	ವೈಡೂರ್ಯ
ಧಾನ್ಯಂ	ಗೋದಿ	ಅಕ್ಕಿ	ತೋಗರಿ	ಹೆಸರು	ಕಡಲಿ	ಅವರಿ	ತಿಲ	ಉದ್ದು	ಹುರುಳಿ
ರಸಃ	ಗುಡ	ಘೃತ	ಗುಡ	ಘೃತ	ಶರ್ಕರ	ಘೃತ	ತೈಲ	ತೈಲ	ತೈಲ
ವಸ್ತ್ರಂ	ರಕ್ತವಸ್ತ್ರ	ಶ್ವೇತವಸ್ತ್ರ	ರಕ್ತವಸ್ತ್ರ	ನೀಲವಸ್ತ್ರ	ಪೀತವಸ್ತ್ರ	ಚಿತ್ರವಸ್ತ್ರ	ಕೃಷ್ಣವಸ್ತ್ರ	ನೀಲವಸ್ತ್ರ	ಕೃಷ್ಣವಸ್ತ್ರ
ಪುಷ್ಪಂ	ರಕ್ತಕಮಲ	ಶ್ವೇತಪುಷ್ಪ	ರಕ್ತಕಮಲ	ಸರ್ವಪುಷ್ಪ	ಪೀತಪುಷ್ಪ	ಶ್ವೇತಪುಷ್ಪ	ಕೃಷ್ಣಪುಷ್ಪ	ಕೃಷ್ಣಪುಷ್ಪ	ಧೂಮ್ರಪುಷ್ಪ
ಜಪಸಂಖ್ಯಾ	7,000	11,000	10,000	4,000	19,000	16,000	23,000	18,000	17,000

ಪೂಜೆಗಾಗಿ ಹಾಗೂ ಉಂಗುರದಲ್ಲಿ ನವಗ್ರಹಗಳನ್ನು ಇಡುವ ಕ್ರಮ. ಗ್ರಹದ ಬಲಭಾಗದಲ್ಲಿ ಅಧಿದೇವತೆ, ಎಡದಲ್ಲಿ ಪ್ರತ್ಯಧಿದೇವತೆ ಹಾಗು ನವಗ್ರಹಗಳ ಶ್ಲೋಕಗಳನ್ನು ನೀಡಲಾಗಿದೆ.

ಈಶಾನ್ಯ	ಪೂರ್ವ		ಆಗ್ನೇಯ
ವಿಷ್ಣು-ಬುಧ-ನಾರಾಯಣ ಪಚ್ಚೆ	ಇಂದ್ರಾಣೀ-ಶುಕ್ರ-ಇಂದ್ರ ವಜ್ರ		ಆಪಃ-ಸೋಮ-ಉಮಾ ಮುತ್ತು
ಉತ್ತರ	ಇಂದ್ರ-ಬೃಹಸ್ಪತಿ-ಬ್ರಹ್ಮಾ ಪುಷ್ಪರಾಗ	ಅಗ್ನಿ-ಸೂರ್ಯ-ರುದ್ರ))ಮಣಿ	ಭೂಮಿ-ಮಂಗಳ-ಸ್ಕಂದ ಪ್ರವಾಲ (ಹವಳ)
	ಬ್ರಹ್ಮಾ-ಕೇತು-ಚಿತ್ರಗುಪ್ತ ವೈಡೂರ್ಯ	ಪ್ರಜಾಪತಿ-ಶನಿ-ಯಮ ನೀಲಮಣಿ	ಸರ್ಪ-ರಾಹು-ಕಾಲ ಗೋಮೇಧ
ವಾಯವ್ಯ	ಪಶ್ಚಿಮ		ನೈಋತ್ಯ

ನವಗ್ರಹ ಸ್ತೋತ್ರಗಳು

ಸೂರ್ಯ	ಜಪಾಕುಸುಮಸಂಕಾಶಂ ಕಾಶ್ಯಪೇಯಂ ಮಹದ್ದ್ಯುತಿಮ್। ತಮೋಽರಿಂ ಸರ್ವಪಾಪಘ್ನಂ ಪ್ರಣತೋಽಸ್ಮಿ ದಿವಾಕರಮ್ ॥
ಚಂದ್ರ	ದಧಿಶಂಖತುಷಾರಾಭಂ ಕ್ಷೀರೋದಾರ್ಣವಸನ್ನಿಭಮ್। ನಮಾಮಿ ಶಶಿನಂ ದೇವಂ ಶಂಭೋರ್ಮುಕುಟಭೂಷಣಮ್॥
ಮಂಗಳ	ಧರಣೀಗರ್ಭಸಂಭೂತಂ ವಿದ್ಯುತ್ಕಾಂತಿಸಮಪ್ರಭಮ್। ಕುಮಾರಂ ಶಕ್ತಿಹಸ್ತಂ ಚ ಮಂಗಲಂ ಪ್ರಣಮಾಮ್ಯಹಮ್ ॥
ಬುಧ	ಪ್ರಿಯಂಗುಕಲಿಕಾಶ್ಯಾಮಂ ರೂಪೇಣಾಪ್ರತಿಮಂ ಬುಧಮ್। ಸೌಮ್ಯಂ ಸೌಮ್ಯ ಗುಣೋಪೇತಂ ತಂ ಬುಧಂ ಪ್ರಣಮಾಮ್ಯಹಮ್ ॥
ಗುರು	ದೇವಾನಾಂ ಚ ಋಷೀಣಾಂ ಚ ಗುರುಂ ಕಾಂಚನಸನ್ನಿಭಮ್। ಬುದ್ಧಿಭೂತಂ ತ್ರಿಲೋಕೇಶಂ ತಂ ನಮಾಮಿ ಬೃಹಸ್ಪತಿಮ್ ॥
ಶುಕ್ರ	ಹಿಮಕುಂದಸಮಾಭಾಸಂ ದೈತ್ಯಾನಾಂ ಪರಮಂ ಗುರುಮ್। ಸರ್ವಶಾಸ್ತ್ರಪ್ರವಕ್ತಾರಂ ಭಾರ್ಗವಂ ಪ್ರಣಮಾಮ್ಯಹಮ್ ॥
ಶನಿ	ನೀಲಾಂಜನಸಮಾಭಾಸಂ ರವಿಪುತ್ರಂ ಯಮಾಗ್ರಜಮ್। ಛಾಯಾಮಾರ್ತಾಂಡಸಂಭೂತಂ ತಂ ನಮಾಮಿ ಶನೈಶ್ಚರಮ್ ॥
ರಾಹು	ಅರ್ಧಕಾಯಂ ಮಹಾವೀರಂ ಚಂದ್ರಾದಿತ್ಯವಿಮರ್ದನಮ್। ಸಿಂಹಿಕಾಗರ್ಭಸಂಭೂತಂ ತಂ ರಾಹುಂ ಪ್ರಣಮಾಮ್ಯಹಮ್ ॥
ಕೇತು	ಪಲಾಶಪುಷ್ಪಸಂಕಾಶಂ ತಾರಕಾಗ್ರಹಮಸ್ತಕಮ್। ರೌದ್ರಂ ರೌದ್ರಾತ್ಮಕಂ ಘೋರಂ ತಂ ಕೇತುಂ ಪ್ರಣಮಾಮ್ಯಹಮ್ ॥

